ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೩ ಏಪ್ರಿಲ್ ೨೦೦೩ ಮತ್ತು ಜುಲೈ ೨೦೦೩ ಸಂಚಿಕೆ ೯, ೧೦, ೧೧,

ಬಾಗ್ದಾದಿನಲ್ಲಿ ಗಾಂಧೀ !

- ಸುರೇಂದ್ರ ಕೌಲಗಿ

ಸಿಂದೂಳ್ಳಿಯ ಕನ್ನಡ ಸೌರಭ ಎಪ್ಪತ್ತರ ಬಿ.ಎ. ಸನದಿ

- ಡಾ|| ಜಿ.ಆರ್. ಉಪಾಧ್ಯ

ಭಾರತೀಯ ವಲಸೆಗಾರರು ಅಮೆರಿಕ ಜನಜೀವನದಲ್ಲಿ ಬೆರೆತು ಒಂದಾಗುವುದು ಸಾಧ್ಯವೆ ?

- ಪ್ರೊ. ವೈ.ಆರ್. ಮೋಹನ್

ರಾಷ್ಟ್ರೀಯ ನ್ಯಾಯಧೀಶರ ಆಯೋಗ : ಒಂದು ಪರಿಚಯ

- ವಿ.ಆರ್. ಕೃಷ್ಣ ಅಯ್ಯರ್

ಪರಿಸರದ ಉಳಿವಿಗಾಗಿ ಪರ್ಯಾಯ ತಂತ್ರಜ್ಞಾನ ಬೇಕು

- ಯು.ಆರ್. ಅನಂತಮೂರ್ತಿ

* ಈ ಸಂಚಿಕೆಯಲ್ಲಿ *

(೧) ಬಾಗ್ದಾದಿನಲ್ಲಿ.ಗಾಂಧೀ - ಸುರೇಂದ್ರ ಕೌಲಗಿ

ಜಗತ್ತು ಸದಾ ಒಂದಲ್ಲ ಒಂದು ಕಾರಣಕ್ಕಾಗಿ ಯುದ್ಧದ ಭೀತಿಯಲ್ಲಿದೆ. ಜಗತ್ತನ್ನು ಯುದ್ಧ ರಹಿತವನ್ನಾಗಿ ಮಾಡುವುದು ಹೇಗೆ ? ಎಂಬ ಪ್ರಶ್ನೆ ಎಲ್ಲ ದೇಶಗಳನ್ನು ಕಾಡುತ್ತಿದೆ. ಇಂಥ ಜಟಿಲ ಪ್ರಶ್ನೆಗೆ ಉತ್ತರ ಕೊಡುವಂತ ಸಾಮರ್ಥ್ಯ ಭಾರತ ದೇಶಕ್ಕೆ ಇದೆ. ಇದಕ್ಕೆ ಕಾರಣ ಭಾರತ ಗಾಂಧೀ ಮತ್ತು ಬುದ್ಧನಂತ ಅಹಿಂಸಕ ವಿಚಾರವಾದಿಗಳನ್ನು ಪಡೆದುದಿದೆ ಆಗಿದೆ. ಇದಕ್ಕೆ ಉದಾಹರಣೆ ಈ ಲೇಖನ ಪುಟ - ೪

(೨) ರಾಷ್ಟ್ರೀಯತ ನ್ಯಾಯಧೀಶರ ಆಯೋಗ ಒಂದು ಪರಿಚಯ - ವಿ.ಆರ್. ಕೃಷ್ಣಅಯ್ಯರ್

ಇತ್ತೀಚೆಗೆ ನ್ಯಾಯಾಂಗ ಕ್ಷೇತ್ರದಲ್ಲಿ ಬಹಳಷ್ಟು ಹೊಸ ಚಿಂತನೆ ನಡೆಯುತ್ತಿದೆ. ಆ ಚಿಂತನೆಯಲ್ಲಿ ನ್ಯಾಯಾಧೀಶರು ಮತ್ತು ಸಂವಿಧಾನಕ್ಕೆ ಸಂಬಂಧಿಸಿದ ವಿಷಯ ಮುಖ್ಯವಾಗಿದೆ. ಯಾವ ಕಾಲಕ್ಕೂ ನ್ಯಾಯಾಧೀಶರಿಗಿಂತ ಸಂವಿಧಾನವೇ ಮುಖ್ಯ ಎಂಬುದಾಗಿ ಈ ಲೇಖನದಲ್ಲಿ ಹಿರಿಯ ಚಿಂತಕರಾದ ವಿ.ಆರ್. ಕೃಷ್ಣಅಯ್ಯರ್ ಪ್ರತಿಪಾದಿಸಿದ್ದಾರೆ. ಪುಟ - ೮

(೩) ಪರಿಸರದ ಉಳಿವಿಗಾಗಿ ಪರ್ಯಾಯ ತಂತ್ರಜ್ಞಾನ ಬೇಕು - ಯು.ಆರ್. ಅನಂತಮೂರ್ತಿ

ಪರಿಸರ ವಿನಾಶಕ್ಕೆ ಮುಖ್ಯ ಕಾರಣ ಮನುಷ್ಯನ ಸ್ವಾರ್ಥ. ಈ ಸ್ವಾರ್ಥಕ್ಕೆ ಬೆಂಬಲವಾಗಿ ನಿಂತಿದೆ. ಆಧುನಿಕ ತಂತ್ರಜ್ಞಾನ ಈ ವಿಷಯಗಳ ಬಗ್ಗೆ ಯಾವ ವಿದ್ಯಾರ್ಥಿಗಳಿಗೆ ಡಾ|| ಯು.ಆರ್. ಅನಂತಮೂರ್ತಿಯವರು ಅನೇಕ ಮಾರ್ಮಿಕ ಮಾತುಗಳನ್ನು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಪುಟ - ೧೩

(೪) ಸಿಂದೂಳ್ಳಿಯ ಕನ್ನಡ ಸೌರಭ ಎಪ್ಪತ್ತರ ಬಿ.ಎ. ಸನದಿ -ಡಾ|| ಜಿ.ಆರ್. ಉಪಾಧ್ಯ

ಕನ್ನಡಕ್ಕಾಗಿ ಕೆಲಸ ಮಾಡಿದ ಅನೇಕ ಹಿರಿಯರಲ್ಲಿ ಬಿ.ಎ. ಸನದಿ ಕೂಡ ಅಗ್ರ ಗಣ್ಯರು. ಈಗ ಅವರಿಗೆ ಎಪ್ಪತ್ತರ ಇಳಿವಯಸ್ಸು ಅವರ ಕನ್ನಡ ಸೇವೆಯನ್ನು ಈ ಲೇಖನದಲ್ಲಿ ಸ್ಮರಿಸಲಾಗಿದೆ. ಪುಟ - ೨೦

(೫) ಜಯಂತ ಮನೋಹರ ಹೀಗೊಬ್ಬ ಬಹು ಭಾಷಾ ವಿಶಾರದೆ - ಮುರುಳಿ ಕೃಷ್ಣ ಬೆಳಾಲು

ಓರ್ವ ಮಹಿಳೆ ಭಾಷಾ ಕ್ಷೇತ್ರದಲ್ಲಿ ಎಂಥ ಅದ್ಭುತೆ ಸಾಧನೆ ಮಾಡಿದ್ದಾರೆ ಎಂಬುದಕ್ಕೆ ಈ ಲೇಖನ ಕೈಗನ್ನಡಿಯಾಗಿದೆ. ಪುಟ - ೨೪

(೬) ಭಾರತೀಯ ವಲಸೆಗಾರರು ಅಮೆರಿಕ ಜನಜೀವನದಲ್ಲಿ ಬೆರೆತು ಒಂದಾಗುವುದು ಸಾಧ್ಯವೇ? - ಪ್ರೊ|| ವೈ.ಆರ್. ಮೋಹನ್

ಭಾರತದ ಪ್ರತಿಯೊಬ್ಬ ಯುವಕನ ಕನಸು ಅಮೇರಿಕಾ. ಆ ದೇಶಕ್ಕೆ ಹೋಗಿ ಬಂದಿದ್ದಾರೆ. ತನ್ನ ಜನ್ಮ ಸಾರ್ಥಕವೆಂದು ಅವನು ಭಾವಿಸುತ್ತಾನೆ. ಅಂಥ ಕನಸು ಕಾಣುವ ಪ್ರತಿಯೊಬ್ಬ ಯುವಕನು ಓದಬೇಕಾದ ಲೇಖನವಿದು. ಪುಟ - ೨೬

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೩

ಸಂಚಿಕೆ ೯, ೧೦, ೧೧, ೧೨

ಏಪ್ರಿಲ್ - ಜುಲೈ ೨೦೦೩

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ,
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ :

ವಾರ್ಷಿಕ	:	ರೂ. ೧೦೦/-
ಅರ್ಧ ವಾರ್ಷಿಕ	:	ರೂ. ೫೦/-
ಬಿಡಿ ಸಂಚಿಕೆ	:	ರೂ. ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ
ಮೇಲುಕೋಟೆ
ಜಿಲ್ಲಾ ಮಂಡ್ಯ - ೫೭೧ ೪೩೧
ದೂರವಾಣಿ :
೦೮೨೩೬-೨೯೮೭೫೪

ಮೋಡದ ಹಾಡು

ಮೋಡ ಮೋಡ
ಹಾಡು ಹೇಳು,
ಮೋಡ ಹಾಡು ಹೇಳಲಿಲ್ಲ
ಮಳೆಯ ಸುರಿಸಿತು
ಹುಡುಗಿ ಹಾಡು
ಹೇಳಿಕೊಂಡು
ದೋಣಿ ತೇಲಿ
ಬಿಟ್ಟಳು
ಚಂದ್ರ ಸುಂದ್ರ
ಕತೆಯ ಹೇಳೊ,
ಚಂದ್ರ ಕತೆಯ ಹೇಳಲಿಲ್ಲ
ಬೆಳಕು ಚೆಲ್ಲಿದ
ಹುಡುಗಿ ಕತೆಯ
ಕಟ್ಟಿಕೊಂಡು
ಕನಸು ಏರಿ
ಹೊರಟಳು
ಸೂರ್ಯ ಸೂರ್ಯ
ಚಿತ್ರ ಬರೆಯೊ,
ಸೂರ್ಯ ಚಿತ್ರ ಬರೆಯಲಿಲ್ಲ
ಬಣ್ಣ ಚೆಲ್ಲಿದ
ಹಸಿರು ಗಿಡ, ಹಸಿರು ಗಿಳಿ
ಕೆಂಪು ಮುಗಿಲು, ಕೆಂಪು ಹೂವು
ಹುಡುಗಿ ಚಿತ್ರ ಬರೆದಳು
ಕಣ್ಣು ಮನವ ಸೆಳೆದಳು
ನೋಡಿ ಕೊಂಡು
ಹಾಡಿ ಕೊಂಡು
ಕುಣಿ ಕುಣಿದು
ನಲಿದಳು

- ಕೃಷ್ಣಮೂರ್ತಿ ಬಿಳಿಗೆರೆ

ವಿಚಾರ ದೀಪ್ತಿ.........................

ಕಾರ್ಮಿಕ ಶೋಷಣೆ ಎನ್ನುವುದು ಕೈಗಾರಿಕಾ ಕ್ರಾಂತಿ ಪ್ರಾರಂಭದ ದಿನದಿಂದಲೇ ಬಂದಿರುವಂತಹದು. ಮಾಲೀಕರ ಧೋರಣೆಯ ವಿರುದ್ಧ ಕಾರ್ಮಿಕರು ಬಂಡೆದ್ದು ರಕ್ತಪಾತಗಳು ನಡೆದದ್ದಿದೆ. ಇದರಿಂದ ಅನೇಕ ಬದಲಾವಣೆಯು ಸಹ ಆಗಿವೆ. ಆದರೆ ಈ ಗಾರ್ಮೆಂಟ್ಸ್ ಕಾರ್ಖಾನೆಯ ಕಾರ್ಮಿಕರಲ್ಲಿ ವಿರೋಧಿಸುವಂತ ಶಕ್ತಿ ಆಗಲಿ ಪ್ರತಿಭಟಿಸುವ ಮನೋಭಾವನೆ ಆಗಲಿ ಇವರು ಕಳೆದುಕೊಂಡಿದ್ದಾರೆ.

ಇಂಥ ಅಡೆತಡೆ ಹಾಗೂ ಭಯದ ಮಧ್ಯಯೂ ತಮ್ಮ ದಿಟ್ಟತನದಿಂದ ಅನೇಕ ಗಾರ್ಮೆಂಟ್ಸ್ ಮಹಿಳೆಯರು ಸೇರಿ ಗಾರ್ಮೆಂಟ್ಸ್ ಕಾರ್ಮಿಕರ ಸಂಘವನ್ನು ಹುಟ್ಟು ಹಾಕಿದ್ದಾರೆ. ಈ ಮೂಲಕ ತಮ್ಮ ಸಮಸ್ಯೆಗಳ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ. ಈಗಾಗಲೇ ವಿಪರೀತ ಕಿರುಕುಳ ಕೊಡುತ್ತಿದ್ದ ಅನೇಕ ಗಾರ್ಮೆಂಟ್ಸ್ ಮಾಲೀಕರ ವಿರುದ್ಧ ಧ್ವನಿಯೆತ್ತಿ ಮಾಲೀಕರು ಸಾಕಿದ ಗೂಂಡಾಗಳಿಂದ ಹೊಡೆತ ತಿಂದಿದ್ದು ಆಗಿದೆ. ತಮ್ಮ ಬಲವನ್ನು ತೋರಿಸಿದ್ದು ಆಗಿದೆ. ಜೊತೆಗೆ ಇದರಿಂದ ಮಾಲೀಕರು ಹಾಗೂ ಸರ್ಕಾರ ಎಚ್ಚರಗೊಂಡಿದೆ.

ವಾಚಕರ ಗಮನಕ್ಕೆ

ಪ್ರತಿ ಮಾಹೆ ಪ್ರಕಟವಾಗಬೇಕಿದ್ದ "ಜನಪದ ವಿಚಾರ" ಗ್ರಾಮಾಂತರ ಪ್ರದೇಶದಲ್ಲಿರುವ ತೀವ್ರತಮವಾದ ವಿದ್ಯುತ್ ಕೊರತೆಯ ಕಾರಣದಿಂದ ೨೦೦೩ ಮಾರ್ಚ್ ಮಾಹೆಯಿಂದ ಪ್ರಕಟವಾಗಿಲ್ಲ. ಇನ್ನು ಮುಂದೆ ಪತ್ರಿಕೆಯನ್ನು ಹೊಸ ವಿನ್ಯಾಸದಲ್ಲಿ ಹತ್ತಿರದ ನಗರ ಪ್ರದೇಶದಲ್ಲಿ ಮುದ್ರಿಸುವ ವ್ಯವಸ್ಥೆಯನ್ನು ಮಾಡಿರುವುದರಿಂದ "ಜನಪದ ವಿಚಾರ" ನಿಯಮಿತವಾಗಿ ಪ್ರಕಟಗೊಳ್ಳುವುದೆಂಬ ಭರವಸೆ ಮೂಡಿದೆ. ಪತ್ರಿಕೆಯ ಪ್ರಕಟಣೆಯಲ್ಲಿ ಚ್ಯುತಿಯುಂಟಾದುದಕ್ಕೆ ವಾಚಕ ಪ್ರೇಮಿಗಳ ಕ್ಷಮೆ ಕೋರುತ್ತಾ ಭವಿಷ್ಯದಲ್ಲಿ ಅವರ ಪೂರ್ಣ ಸಹಕಾರವನ್ನು ಕೋರುತ್ತೇವೆ.

- ಪ್ರಕಾಶಕರು

ವಾಚಕ ಮಿತ್ರರಲ್ಲಿ ವಿನಂತಿ

"ಜನಪದ ವಿಚಾರ"ದ ಈ ಸಂಚಿಕೆಯನ್ನು ನಿಮ್ಮ ಬಳಿಗೆ ತಲುಪಿಸುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆ! ಅನೇಕ ವರ್ಷಗಳ ನಂತರ ಪುನಃ ಪತ್ರಿಕ ದಿನದ ಬೆಳಕನ್ನು ಕಂಡಿದೆ. ಹೊಸ ಶತಮಾನದ, ಹೊಸ ಸಹಸ್ರ ಮಾನದ ಸಂಕ್ರಾಂತಿ ಕಾಲದ ಪ್ರೇರಣೆಯೊಂದಿಗೆ. ದಯಮಾಡಿ ವಾರ್ಷಿಕ ಚಂದಾ ೧೦೦/- ರೂ. ಗಳನ್ನಾಗಲೀ ಇಲ್ಲವೇ ಈ ಪತ್ರಿಕೆಯ ಮುಖಬೆಲೆ ೧೦/- ರೂ.ಗಳನ್ನಾಗಲೀ ನಿಮ್ಮ ಇಚ್ಛೆಗನುಸಾರವಾಗಿ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

- ಪ್ರಕಾಶಕರು

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ. ಅವುಗಳನ್ನು ಪ್ರಕಟಿಸಲಾಗುವುದು.

ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

ಬಾಗ್ದಾದಿನಲ್ಲಿ ಗಾಂಧೀ !

- ಸುರೇಂದ್ರ ಕೌಲಗಿ

ಇದು ಈ ಲೇಖನದ ಶೀರ್ಷಿಕೆ ಮಾತ್ರವಲ್ಲ, ಒಂದು ಜನಪ್ರಿಯ ಇಂಗ್ಲಿಷ್ ವಾರ ಪತ್ರಿಕೆಯಲ್ಲಿಯ ಲೇಖನದ ಶೀರ್ಷಿಕೆಯೂ ಸಹ. ವಿಶ್ವದಲ್ಲಿ ಎಲ್ಲಿಯೇ ಒಂದು ತುಮುಲ ನಡೆಯಲಿ ಅಲ್ಲಿ ಗಾಂಧಿಯ ಪ್ರಸ್ತಾಪ ಬಾರದೇ ಇರುವುದಿಲ್ಲ. ವಿಶ್ವ ಯುದ್ಧದಂಥ ಘಟನೆಯಿಂದ ಹಿಡಿದು ದೂರದ ಒಂದು ಹಳ್ಳಿಯಲ್ಲಿ ದಲಿತರ ಮೇಲೆ ನಡೆಯುವ ದೌರ್ಜನ್ಯದವರೆಗಿನ ಘಟನೆಗಳ ವ್ಯಾಪ್ತಿಯ ಸಂದರ್ಭದಲ್ಲಿ ಗಾಂಧಿಯ ಪ್ರಸ್ತಾಪ ಸರ್ವೆ ಸಾಮಾನ್ಯವಾಗಿ ಬರುವುದುಂಟು. ಇದಕ್ಕೆ ಮುಖ್ಯ ಕಾರಣ ಹಲವಾರು. ಮೊದಲನೆಯದಾಗಿ, ಗಾಂಧೀ ಓರ್ವ ಸಾಮಾಜಿಕ ಸಕ್ರಿಯ ಚಿಂತಕರಾಗಿರುವುದರ ಜೊತೆಗೆ ಸಕ್ರಿಯ ಸಾಮಾಜಿಕ ಕಾರ್ಯಕರ್ತರಾಗಿದ್ದರು; ಎರಡನೆಯದಾಗಿ, ಅವರು ಸಮಸ್ಯೆಗೆ ಮುಖಾಮುಖಿಯಾಗಿ ನಿಲ್ಲುತ್ತಿದ್ದರೇ ಹೊರತು ಸಮಸ್ಯೆಗೆ ವಿಮುಖರಾಗಿ ನಿಲ್ಲುತ್ತಿರಲಿಲ್ಲ. ಮೂರನೆಯದಾಗಿ, ಸಮಸ್ಯೆಗಳಿಗಿರುವ ಪರಿಹಾರ ಸೂತ್ರದ ಬಿರುಗಾಳಿಯ ಕೇಂದ್ರ ಬಿಂದು ಅವರಾಗಿರುತ್ತಿದ್ದರು. ಆದ್ದರಿಂದೇ ಎಲ್ಲೆಲ್ಲಿ ಸಮಸ್ಯೆಯೋ ಅಲ್ಲಲ್ಲಿ ಗಾಂಧೀ ಎಂಬ ಮಾತು ರೂಢಿಯಲ್ಲಿ ಬಂದಿದೆ. ಅಷ್ಟೇ ಅಲ್ಲ, "ಸಂಕಟ ಬಂದಾಗ ವೆಂಕಟರಮಣ" ಎಂಬ ಗಾದೆಯಲ್ಲಿ ವೆಂಕಟರಮಣ ಬದಲಾಗಿ ಗಾಂಧೀ ಎಂಬ ಪದವನ್ನು ಉಪಯೋಗಿಸಿದರೆ ತಪ್ಪಾಗಲಾರದು ಎಂಬಷ್ಟರ ಮಟ್ಟಿಗೆ ಗಾಂಧೀ ಚಿಂತನೆ ಇಂದು ದೇಶದ ಎಲ್ಲ ಚಿಂತಕರ ಹಾಗೂ ಸಾಮಾಜಿಕ ಕಾರ್ಯಕರ್ತರ ಮನದಾಳದಲ್ಲಿ ನೆಲೆಯೂರಿದೆ. ಅದರ ಪರಿಣಾಮವಾಗಿಯೇ ತುಮುಲ, ಘರ್ಷಣೆ, ರಕ್ತಪಾತ, ಶೋಷಣೆ ಇತ್ಯಾದಿಗಳ ಸಂದರ್ಭದಲ್ಲೆಲ್ಲ ಗಾಂಧೀ ಹೆಸರು ನಮಗೆ ಅರಿವಾಗದಂತೆ ಪ್ರಸ್ತಾಪಿಸಲ್ಪಡುತ್ತದೆ. ಆದ್ದರಿಂದಲೇ ಏನೋ ಭಾರತೀಯರು ಮೋಹನದಾಸ ಗಾಂಧೀಜಿಯಂಥ ಒಬ್ಬ ಸಾಮಾನ್ಯ ಚೇತನನನ್ನು ಮಹಾತ್ಮಾ ಎಂದು ಸಹಜ ಸುಂದರವಾಗಿ ಕರೆವರು.

1940ರಿಂದ 1947ರ ಕಾಲ ಭಾರತದ ಇತಿಹಾಸದಲ್ಲಿ ಅತ್ಯಂತ ಕರಾಳ ವರ್ಷಗಳು. ಶತಶತಮಾನಗಳಿಂದ ಒಂದಾಗಿದ್ದ ಭಾರತವು ಧರ್ಮದ ಹೆಸರಿನಲ್ಲಿ ಇಬ್ಭಾಗವಾಗುವುದಕ್ಕೆ ಏನೆಲ್ಲ ಕಾರಣಗಳು ಬೇಕೋ ಅವೆಲ್ಲವೂ ಆ ಏಳು ವರ್ಷಗಳ ಅವಧಿಯಲ್ಲಿ ಮಾರುತತುಲ್ಯ ವೇಗದಲ್ಲಿ ಘಟಿಸಿದವು. ಅಂಥ ಭಯಂಕರ ಘಟನಾ ಚಕ್ರಗಳ ಮಧ್ಯೆ ಗಾಂಧೀ ಖಂಡಿತವಾಗಿ ಇದ್ದರು. ಆದರೆ ಅವರಿಂದ ಭಾರತದ ವಿಭಜನೆಯನ್ನು ತಪ್ಪಿಸಲಾಗಲಿಲ್ಲ. ಹಾಗಿರುವಾಗ ಅಮೇರಿಕದಂಥ ಅತ್ಯಂತ ಬಲಾಢ್ಯ ದೇಶವೊಂದು ಇರಾಕ್‌ನಂಥ ಹಿಂದುಳಿದ ಹಾಗೂ

ಚಿಕ್ಕ ದೇಶದ ಮೇಲೆ ಸ್ವಾರ್ಥ ದೃಷ್ಟಿಯಿಂದ ದಾಳಿ ಮಾಡಿದ ಸಂದರ್ಭದಲ್ಲಿ ಗಾಂಧೀ ಒಂದು ವೇಳೆ ಇರಾಕ್‌ನ ರಾಜಧಾನಿ ಬಾಗ್ದಾದಿನಲ್ಲಿ ಇದ್ದಿದ್ದರೆ ಯಾವ ರೀತಿ ಅಲ್ಲಿಯ ಜನತೆಗೆ ನಾಯಕತ್ವ ಕೊಡುತ್ತಿದ್ದರು ಮತ್ತು ಗಾಂಧೀಜಿಯವರ ಚಿಂತನೆ ಯಾವ ಪ್ರಕಾರ ಇರುತ್ತಿತ್ತು ಎಂಬ ವಿಷಯವಾಗಿ ಆಲೋಚಿಸುವುದೇ ಒಂದು ರೋಚಕ ವಿಷಯವಾಗುವುದರ ಜೊತೆಗೆ ಗಾಂಧೀ ವಿಚಾರಗಳ ಅನ್ವಯದ ಸಾಧ್ಯಾಸಾಧ್ಯತೆಗಳನ್ನು ಕುರಿತು ಸಂಶೋಧನೆ ಮಾಡುವಂಥ ವಿಷಯವೂ ಆಗಿದೆ ಎಂಬುದಕ್ಕೆ ಇಂಗ್ಲಿಷ್ ವಾರ ಪತ್ರಿಕೆಯಲ್ಲಿಯ ಲೇಖನವೊಂದಕ್ಕೆ "ಬಾಗ್ದಾದಿನಲ್ಲಿ ಗಾಂಧಿ" ಎಂಬ ಶೀರ್ಷಿಕೆ ಪ್ರಚೋದಕವಾಗಿದೆ.

ಇರಾಕ್‌ನಲ್ಲಿ ನಾವು ಕಂಡದ್ದು ಜನ ಸಾಮಾನ್ಯರ ನಿರ್ಮಮ ಹತ್ಯ; ತಮ್ಮ ದೇಶದ ಸರ್ಕಾರವನ್ನು ತಾವೇ ಬದಲಾಯಿಸ ಬೇಕಾದ ಜನರ ಮೂಲಭೂತ ಹಕ್ಕಿನ ತುಳಿತ; ಇಡೀ ಪ್ರಪಂಚದ ಆಸ್ತಿಯಾಗಿರಬೇಕಾದ ತೈಲ ಸಂಪತ್ತಿನ ಮೇಲೆ ಕೇವಲ ಅಮೆರಿಕಾ ದೇಶವೊಂದರ ಒಡೆತನದ ಸ್ಥಾಪನೆ.

ದಾಳಿ ಮಾಡಿದ ದೇಶ ಎಲ್ಲ ಅರ್ಥದಲ್ಲೂ ಅತ್ಯಂತ ಬಲಾಢ್ಯ; ದಾಳಿಗೆ ತುತ್ತಾದ ದೇಶ ಎಲ್ಲ ಅರ್ಥದಲ್ಲೂ ಅತಂತ್ರವಾದುದಂಥದು. ಇಂಥ ಪರಿಸ್ಥಿತಿ ಭಾರತದ ವಿಭಜನೆಯ ಕಾಲದಲ್ಲಿ ಇರಲಿಲ್ಲ. ವಿಭಜನೆ ಯಾವುದೇ ನೇರ ವಿದೇಶಿ ದಾಳಿಯ ಕಾರಣದಿಂದಾದುದಲ್ಲ. ನಾಗರಿಕರ ಆಂತರಿಕ ಕಲಹದ ಕಾರಣದಿಂದ. ಹೀಗೆ ಭಾರತ ಮತ್ತು ಇರಾಕ್ ದೇಶಗಳಲ್ಲಿಯ ಪರಿಸ್ಥಿತಿ ಅತ್ಯಂತ ಭಿನ್ನವಾಗಿರುವಾಗ ಬಾಗ್ದಾದಿನಲ್ಲಿ ಗಾಂಧೀ ಹೇಗೆ ಇರಲು ಸಾಧ್ಯ ಎಂಬ ಪ್ರಶ್ನೆ ಹುಟ್ಟುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಪ್ರಶ್ನೆ ಇರಲಿ; ಕಲ್ಪನೆಯನ್ನೂ ಮಾಡುವುದು ಸಹ ಅತಾರ್ಕಿಕವೆನಿಸುತ್ತದೆ.

ಆದರೆ ಈಗಾಗಲೆ ಎಲ್ಲರೂ ತಿಳಿದಿರುವಂತೆ ಗಾಂಧೀ ಓರ್ವ ವ್ಯಕ್ತಿಯಲ್ಲ. ಅದೊಂದು ಜೀವನ ವಿಧಾನ ಮತ್ತು ಅನೇಕ ಮಾನವೀಯ ಮೌಲ್ಯಗಳ ಹಾಗೂ ಮಾನವೀಯ ಶಕ್ತಿಗಳ ಸಂಕೇತ. ದುರ್ಬಲರನ್ನು ಬಲಾಢ್ಯರನ್ನಾಗಿ ಮಾಡುವ ಹಾಗೂ ಬಲಾಢ್ಯರನ್ನು ಬಗ್ಗಿಸುವ ರೀತಿಯನ್ನು ತಿಳಿದಿದ್ದಂಥ ವ್ಯಕ್ತಿ ಗಾಂಧೀ. ಅದಕ್ಕಾಗಿ ಅವರು ಬೋಧಿಸಿದ್ದಂಥ ತತ್ವಗಳಲ್ಲಿ ಎರಡು ಪ್ರಮುಖವಾದವುಗಳು : ಒಂದು ಅಹಿಂಸೆ, ಇನ್ನೊಂದು ಅಸಹಕಾರ. ಗಾಂಧಿಯ ಅಹಿಂಸೆ ಹೇಡಿಗಳದಲ್ಲ, ವೀರರದು. ಅವರ ಮಾತಿನಲ್ಲೇ ಹೇಲುವುದಾದರೆ, "ಯಾರು ಅಹಿಂಸಕ ಸಾಧನಗಳಿಂದ ಹೋರಾಡುತ್ತಾರೋ ಅವರೇ ವೀರರೆಂದು ನಾನು ಆಗಾಗ್ಗೆ ಹೇಳಿದ್ದೇನೆ." ಗಾಂಧೀ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದ ಹನ್ನೊಂದು ವ್ರತಗಳಲ್ಲಿ ಅಹಿಂಸೆಯೂ ಒಂದಾಗಿತ್ತು. ವ್ರತವೆಂದರೆ ನೂರಕ್ಕೆ ನೂರು ಆಚರಣೆ. ಇಂಥ ಆಚರಣೆ ಆಯಾ ವ್ರತದ ಹಿಂದಿರುವ ವಿಚಾರವನ್ನು ಅರ್ಥಮಾಡಿಕೊಂಡಾಗ ಮಾತ್ರ ಸಾಧ್ಯ. ಆದ್ದರಿಂದ ಗಾಂಧೀ ತಮ್ಮ ಸ್ವಂತ ಜೀವನದಲ್ಲಿ ಹೇಗೋ ಹಾಗೆ ಸಾರ್ವಜನಿಕ ಜೀವನದಲ್ಲಿಯೂ ಅಹಿಂಸೆಯನ್ನು ಬಳಕೆಗೆ ತರಲು ಪ್ರಯತ್ನಿಸಿದರು. ದೇಶದ ಸ್ವಾತಂತ್ರ್ಯ ಚಳುವಳಿಯ ಅನೇಕ

ಸಂದರ್ಭಗಳಲ್ಲಿ ಗಾಂಧೀ ಅಹಿಂಸೆಯನ್ನು ಪ್ರಯೋಗಿಸಿದರು. ಅದನ್ನು ಅವರು ಅಸಹಕಾರದ ರೂಪದಲ್ಲಿ ಪ್ರಕಟಿಸಿದರು. ಹಿಂಸೆಯನ್ನು ಮಾಡಲು ಉದ್ಯುಕ್ತವಾದ ವ್ಯಕ್ತಿಯ ಕೈಯಲ್ಲಿ ಸಾಧಾರಣವಾಗಿ ಯಾವುದಾದರೊಂದು ಆಯುಧ ಇರುತ್ತದೆ. ಆಯುಧ ಹಿಡಿದ ವ್ಯಕ್ತಿ ತನ್ನ ಎದುರಿಗಿರುವ ವ್ಯಕ್ತಿ ಕೂಡ ಆಯುಧ ಹಿಡಿದುದನ್ನು ನೋಡಿದರೆ ಹಿಂಸೆಗಿಳಿದ ವ್ಯಕ್ತಿಯ ರೋಷ ಇನ್ನೂ ಹೆಚ್ಚಾಗುತ್ತದೆ. ಆದ್ದರಿಂದ ಪ್ರತ್ಯಕ್ಷವಾಗಿ ಕಾಣುವ ಆಯುಧದ ಬದಲಾಗಿ ಅಪ್ರತ್ಯಕ್ಷವಾಗಿರುವ ಅಸಹಕಾರ ಹಿಂಸೆಗೆ ಕಾರಣವಾಗುವ ಪರಿಸ್ಥಿತಿಯನ್ನು ಬಹಳಷ್ಟು ನಿಯಂತ್ರಣಕ್ಕೆ ತರಲು ಯಶಸ್ವಿಯಾಗುತ್ತದೆ. ಈ ವಿಚಾರವನ್ನು ಗಾಂದೀ ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಹಾಗೂ 1942ರ "ಭಾರತ ಬಿಟ್ಟು ತೊಲಗಿ" ಚಳುವಳಿಯ ಸಂದರ್ಭದಲ್ಲಿ ಪ್ರಯೋಗಿಸಿ ನೋಡಿದರು. ಆಗ ಬಲಾಢ್ಯವಾಗಿದ್ದ ಇಂಗ್ಲಿಷ್ ಸರ್ಕಾರ ನಿಃಸಹಾಯಕವಾಯಿತು. ಆದ್ದರಿಂದಲೇ ಭಾರತದ ಸ್ವಾತಂತ್ರ್ಯ ಅಹಿಂಸಕವಾಗಿ ಪಡೆದ ಸ್ವಾತಂತ್ರ್ಯ ಎಂದು ಜಾಗತಿಕ ಇತಿಹಾಸದಲ್ಲಿ ದಾಖಲೆಗೊಂಡಿತು. ಗಾಂಧಿಯ ಈ ಸಿದ್ಧಾಂತವನ್ನು ಗಮನದಲ್ಲಿರಿಸಿಕೊಂಡೇ "ಬಾಗ್ದಾದಿನಲ್ಲಿ ಗಾಂಧೀ" ಎಂಬ ಲೇಖನದ ಲೇಖಕ ತನ್ನ ಲೇಖನದಲ್ಲಿ ಮಂಡಿಸಿದ ತರ್ಕ ಹೀಗೆ ಸಾಗುತ್ತದೆ. "ಇರಾಕ್ ಮೇಲೆ ದಾಳಿಯಾದಾಗ ಬಲಿಯಾದ ಜನರ ಚಿತ್ರಗಳನ್ನು ಜಗತ್ತಿನಾದ್ಯಂತ ತೋರಿಸಲಾಯಿತು. ಆ ನಂತರ ನಡೆದ ಲೂಟಿ, ಕಿತ್ತಾಟ ಹಾಗೂ ಆಮೇಲೆ ನಾಗರಿಕತೆಯ ತೊಟ್ಟಿಲಾದ ಇರಾಕಿನ ಅಮೂಲ್ಯ ಪಳೆಯುಳಿಕೆಗಳನ್ನು ಹೊಂದಿದ್ದ ಸಂಗ್ರಹಾಲಯಗಳ ನಾಶವನ್ನು ಸಹ ತೋರಿಸಲಾಯಿತು. ನಂತರ ಅಮೇರಿಕಾ ಸಿರಿಯಾಗೆ ಕೊಟ್ಟ ಎಚ್ಚರಿಕೆಯ ಮಾತು ಬಂತು. ಇಂಥದೇ ಎಚ್ಚರಿಕೆಯನ್ನು ಅಮೇರಿಕಾ ಇರಾಕ್ ಮೇಲೆ ದಾಳಿ ಮಾಡುವುದಕ್ಕಿಂತ ಮೊದಲು ಕೊಟ್ಟಿತ್ತು. ಇದೆಲ್ಲವನ್ನು ನೋಡಿದಾಗ ಒಂದು ಪ್ರಶ್ನೆ ಮೂಡಿ ಬಂತು. ಮಿಲಿಟರಿ ಶಕ್ತಿಯನ್ನು ಎದುರಿಸಲು ಬೇರೊಂದು ಪ್ರಕಾರದ ವಿಜನ್ ಹೊಂದಿರಲು ಸಾಧ್ಯವಿಲ್ಲವೇ? ಶಾಂತಿ ಸಾಧನಗಳಿಂದ ದಾಳಿಯನ್ನು ಎದುರಿಸಲು ಸಾಧ್ಯವಿರುವ ಬಗ್ಗೆ ಆಲೋಚಿಸಲು ಶಕ್ಯವಿಲ್ಲವೆ? ಮಹಾತ್ಮ ಗಾಂಧೀಯವರ ನೇತೃತ್ವದಲ್ಲಿ ಬಾಗ್ದಾದಿನಲ್ಲಿ ಶಾಂತಿ ಪಡೆಗಳು ಹೇಗಿರುತ್ತಿದ್ದವೆಂಬ ಬಗ್ಗೆ ಕಲ್ಪನೆ ಮಾಡಿಕೊಳ್ಳೋಣ. ದಾಳಿಕೋರ ಸೈನ್ಯವು ಪ್ರವೇಶ ಮಾಡುತ್ತಿದ್ದಂತೆಯೇ ಸುಸಂಘಟಿತರಾದ ದೊಡ್ಡ ಸಂಖ್ಯೆಯ ಶಾಂತಿಪೂರ್ಣ ಪುರುಷರು, ಮಹಿಳೆಯರು ಹಾಗೂ ಮಕ್ಕಳು ದಾಳಿಕೋರರನ್ನು ಸ್ವಾಗತಿಸುತ್ತಿದ್ದರು. ವಿಶೇಷವಾಗಿ ಮಹಿಳೆಯರು ಈ ಕೆಲಸವನ್ನು ಮಾಡುತ್ತಿದ್ದರು. ಈ ಎಲ್ಲ ಜನ ತಮ್ಮ ಕೈಯಲ್ಲಿ "ದಯಮಾಡಿ ವಾಪಸ್ಸು ಹೋಗಿ. ನಮ್ಮ ಭವಿಷ್ಯವನ್ನು ನಾವೇ ನಿರ್ಧರಿಸುವೆವು. ವಸಾಹತುಶಾಹಿ ಸಲ್ಲದು. ವಿದೇಶಿ ಸೇನೆ ಪ್ರಜಾತಂತ್ರವನ್ನು ತರಲಾರದು" ಎಂಬಂಥ ಘೋಷಣೆಗಳುಳ್ಳ ಭಿತ್ತಿ ಪತ್ರಗಳನ್ನು ಹಿಡಿದಿರುತ್ತಾರೆ.

ಇರಾಕಿಗಳ ಈ ಶಾಂತಿಯುತ ತಡೆಗೆ ಪ್ರಪಂಚದಾದ್ಯಂತ ಬೇರೆ ಬೇರೆ ದೇಶಗಳಿಂದ

ಮುಖ್ಯವಾಗಿ ಅಮೇರಿಕಾ ದೇಶದಿಂದ ಬಂದಂಥ ನೂರಾರು, ಸಾವಿರಾರು ಸ್ವಯಂಸೇವಕರು ಸಹ ಕೈಗೂಡಿಸುತ್ತಾರೆ. ಎಲ್ಲೆಲ್ಲಿ ದಾಳಿಕೋರರು ಹೋಗುತ್ತಾರೋ ಅಲ್ಲೆಲ್ಲ ಈ ಸ್ವಯಂ ಸೇವಕರು ಅವರನ್ನು ಸ್ವಾಗತಿಸುತ್ತಾರೆ. ದಾಳಿಕೋರರಿಗೆ ಸಹಾಯ ಮಾಡುವ ಸ್ಥಳೀಯ ದಾಳಿಕೋರರು ಸಹ ಇದೇ ರೀತಿಯ ತಡೆಯನ್ನು ಎದುರಿಸುವರು.

ಇಷ್ಟೆಲ್ಲಾ ಆದ ಮೇಲೂ ದಾಳಿಕೋರರು ಹಿನ್ನಡೆ ಮಾಡದಿದ್ದರೆ ಆಗ ಜನರು ವಿದೇಶಿ ಸರಕಾರದ ವಿರುದ್ಧ ಸಂಪೂರ್ಣ ಅಸಹಕಾರ ಚಳುವಳಿಯನ್ನು ಹೂಡುವರು. ಪರಿಹಾರ ಕಾರ್ಯ, ವೈದ್ಯಕೀಯ ಸೇವೆ ಮುಂತಾದವುಗಳನ್ನು ಈ ಚಳುವಳಿಯ ಹೊರಗೆ ಇಡುವರು. ದಾಳಿಕೋರರು ಸರಕಾರದ ಆಡಳಿತದ ಪ್ರತಿ ಹಂತದಲ್ಲೂ ಶಾಂತಿಪೂರ್ಣವಾದ ತಡೆಯನ್ನು ಒಡ್ಡುವರು. ಈ ಶಾಂತಿಪೂರ್ಣ ತಡೆಗೆ ಪ್ರಪಂಚದಾದ್ಯಂತವಿರುವ ಶಾಂತಿ ಪ್ರಿಯ ಜನರೆಲ್ಲರೂ ಬಹಳ ದೊಡ್ಡ ಬಗೆಯಲ್ಲಿ ಇರಾಕಿ ಜನರಿಗೆ ಬೆಂಬಲ ಕೊಡುವರು. ಈ ಬೆಂಬಲ ಮುಖ್ಯವಾಗಿ ದಾಳಿಕೋರ ದೇಶದ ಜನರಿಂದ ವಿವಿಧ ರೂಪದಲ್ಲಿ ದೊರೆಯುವುದು. ದಾಳಿಕೋರರು ಹಿಂದಿರುಗಲು ಒಪ್ಪುವವರೆಗೂ ಈ ಪ್ರಕಾರದ ತಡೆ ನಡೆಯುವುದು. ಇಂಥ ಶಾಂತಿಮಯ ಹೋರಾಟಕ್ಕೆ ಯಶಸ್ಸು ದೊರೆಯಬೇಕಾದರೆ ವಿಶಾಲ ತಳಹದಿಯ ಮೇಲೆ ನಿಂತ ಜನತೆಯ ಏಕತೆ, ಬಹಳಷ್ಟು ಸಿದ್ಧತೆ, ತರಬೇತಿ ಅಹಿಂಸೆಯಲ್ಲಿ ದೃಢವಾದ ನಂಬಿಕೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಅಗಾಧವಾದ ಧೈರ್ಯ ಇರಬೇಕಾಗುತ್ತದೆ. ಮಹಾತ್ಮಾ ಗಾಂಧೀಯವರೇ ಹೇಳಿದಂತೆ ಪೂರ್ಣಪ್ರಮಾಣದ ಅಸಹಕಾರಕ್ಕೆ ಉಚ್ಚಕೋಟಿಯ ಧೈರ್ಯ ಇರಬೇಕಾಗುತ್ತದೆ.

ಇದು ಬಾಗ್ದಾದಿನಲ್ಲಿ ಗಾಂದೀ ನಡೆಸಬಹುದಾಗಿದ್ದ ಹೋರಾಟದ ತರ್ಕ.

ಇದು ಅಸಾಧ್ಯವಾದ ಹಾಗೂ ಅವಾಸ್ತವವಾದ ಸಂಗತಿ ಎಂದೆನಿಸಬಹುದು. ಆದರೆ ಇದುವರೆಗೆ ಪ್ರಪಂಚ ಅನಾಗರಿಕತೆಯಿಂದ ನಾಗರಿಕತೆಯ ದಾರಿಯಲ್ಲಿ ಇಂಥ ಅವಾಸ್ತವ ಮತ್ತು ಅಸಾಧ್ಯವಾದುದನ್ನು ಸಾಧಿಸುತ್ತಲೇ ಮುಂದೆ ಬಂದಿಲ್ಲವೆ?

ರಾಷ್ಟ್ರೀಯ ನ್ಯಾಯಧೀಶರ ಆಯೋಗ : ಒಂದು ಪರಿಚಯ

- ವಿ.ಆರ್. ಕೃಷ್ಣ ಅಯ್ಯರ್

ಸಂವಿಧಾನ ತಮಗಿಂತಲೂ ಮೇಲಿನದು ಎಂಬ ಸಂಗತಿಯನ್ನು ನ್ಯಾಯಾಧೀಶರು ನೆನಪಿಟ್ಟುಕೊಳ್ಳಬೇಕು. ನ್ಯಾಯಾಂಗೀಯ ನಿಯುಕ್ತಿಗಳ ವಿಷಯವನ್ನು ನ್ಯಾಯಾಧೀಶರಿಗೇ ಬಿಟ್ಟು ಕೊಡುವುದಕ್ಕೆ ಸಾಧ್ಯವಾಗದ್ದನ್ನು ಮೀರಿದ ಮಹತ್ವದ ವಿಷಯವಾಗಿದೆಯೆಂದು ಈಗ ಸಾರ್ವತ್ರಿಕ ಅಭಿಪ್ರಾಯವುಂಟಾಗಿದೆ.

"ಶ್ರೇಷ್ಠ ಆದರೆ ದೋಷತೀತವಲ್ಲ" ಇದು ಸುಪ್ರೀಂಕೋರ್ಟ್ ತನ್ನ ಬಗ್ಗೆಯೇ ಪ್ರಕಟಿಸಿರುವ ಪ್ರಸಕ್ತದ ಶೀರ್ಷಿಕೆ. ಕೋರ್ಟ್ ದೋಷಾತೀತವೇನೋ ಇದೆ. ಆದರೆ ಅದರ ಅಂತಿಮತೀರ್ಪು ಗಂಭೀರ ಸ್ವರೂಪದಾಗಿದ್ದರೆ ಅದನ್ನು ತಿದ್ದಲು ಇರುವ ಉಪಾಯವೆಂದರೆ ಸಂವಿಧಾನದ ತಿದ್ದುಪಡಿ. ತಪ್ಪುಮಾಡುವುದು ಮಾನವನ ಸ್ವಭಾವ. ನ್ಯಾಯಧೀಶರು ಮಾನವರೇ ಆಗಿದ್ದಾರೆ. ಅಂಥ ಒಂದು ಅಪಾಮಾರ್ಗಿಯವಾದ ಪರಿಸ್ಥಿತಿ ಈಗ ಉದ್ಭವ ವಾಗಿದೆ. ಈ ಪರಿಸ್ಥಿತಿ (Second Judge's Case) ಎಂದೇ ಪ್ರಸಿದ್ಧವಾಗಿದೆ. ಇದುವರೆಗೆ ಹೈಕೋರ್ಟು ಮತ್ತು ಸುಪ್ರಿಂಕೋರ್ಟಿನ ನ್ಯಾಯಾಧೀಶರ ನಿಯುಕ್ತಿ ಅಧಿಕಾರ ಕಾರ್ಯಾಂಗಕ್ಕೇ ಇತ್ತು. ಆದರೆ ಈಗ ಸುಪ್ರಿಂಕೋರ್ಟ್ ತನ್ನ ಒಂದು ತೀರ್ಪಿನ ಮೂಲಕ ಕಾರ್ಯಾಗದ ಆ ಅಧಿಕಾರವನ್ನು ಪೂರ್ಣವಾಗಿ ಕಿತ್ತುಕೊಂಡಿದೆ. ನ್ಯಾಯಾಂಗವು ಸ್ವತಂತ್ರ ವಾಗಿರಬೇಕೆಂಬ ಸಿದ್ಧಾಂತದ ಆಧಾರದ ಮೇಲೆ ಆ ತೀರ್ಪನ್ನು ಕೊಟ್ಟಿದೆ. ಸಂವಿಧಾನವು ಆ ಸಿದ್ಧಾಂತವನ್ನು ಬಹಳ ಸ್ಪಷ್ಟವಾಗಿ ತಳ್ಳಿಹಾಕಿದೆ. ಅಷ್ಟೇಯಲ್ಲ, ಸಂವಿಧಾನ ರಚನಾ ಸಭೆಯ ನಡುವಳಿಕೆಗಳಲ್ಲಿಯೂ ಸಹ ಆ ಸಿದ್ಧಾಂತವನ್ನು ಒಪ್ಪಿಕೊಳ್ಳಲಾಗಿಲ್ಲ. ಆ ತೀರ್ಪಿನ್ನು ಇಬ್ಬರು ನ್ಯಾಯಾಧೀಶರು ಸಹ ಒಪ್ಪಿಲ್ಲ. ಆದರೆ ಏಳು ನ್ಯಾಯಾಧೀಶರು ತಮ್ಮ ಸಂಖ್ಯಾಬಲದಿಂದ ವಿಜಯವನ್ನು ಸಾಧಿಸಿದರು. ಆದರೆ ಇದು ಕಾನೂನಿಗೆ ಒಳಪಡುತ್ತದೆ. ಏಕೆಂದರೆ ನ್ಯಾಯಾಧೀಶರು ಯಾವ ರೀತಿ ಅರ್ಥೈಸುತ್ತಾರೋ ಆ ರೀತಿಯಾಗಿ ಸಂವಿಧಾನ ವನ್ನು ಅಂಗೀಕರಿಸಲಾಗುತ್ತದೆ. ಅಂಥ ಅಭಿಪ್ರಾಯವು ತೀವ್ರ ಭಿನ್ನಾಭಿಪ್ರಾಯದಿಂದ ಕೂಡಿದ್ದರೂ ಸಹ ಆ ಅಭಿಪ್ರಾಯವೂ ಅಂಗೀಕರಿಸಲ್ಪಡುತ್ತದೆ. ವಿಶ್ವದಾದ್ಯಂತ ನ್ಯಾಯಾ ಧೀಶರ ನಿಯುಕ್ತಿಯ ಅಧಿಕಾರವು ಕಾರ್ಯಾಂಗಕ್ಕೆ ಅಥವಾ ಹಿರಿಯ ನ್ಯಾಯಾಧೀಶರಿಗೇ ಸೇರಿರುತ್ತಾದರೂ ಕಾರ್ಯಾಂಗವನ್ನು ದೂರಿಕರಿಸಿ ನಿಯುಕ್ತಿ ಮಾಡುವಂತಿಲ್ಲ. ನ್ಯಾಯಾಂಗದ ಸ್ವಾತಂತ್ರ್ಯ ಬಹಳ ಗಟ್ಟಿಯಾದ ಅಂಶಗಳಿಂದ ಕೂಡಿರುತ್ತದೆ. ಈ ಮಾತನ್ನು ಅಮೇರಿಕಾದ ನ್ಯಾಯಾಧೀಶರು ತಮ್ಮ ತೀರ್ಮಾನಗಳಿಂದ ತೋರ್ಪಡಿಸಿದ್ದಾರೆ. ಅದೇ ರೀತಿ

ಇಂಗ್ಲೆಂಡಿನಲ್ಲಿ ಲಾರ್ಡ್ ಆಟಾಕಿನ್‌ರಂಥ ಇತರ ನ್ಯಾಯಾಧೀಶರು ಅನೇಕ ಪ್ರಖ್ಯಾತ ತೀರ್ಪುಗಳಿಂದ ಈ ಮಾತನ್ನು ಸಮರ್ಥಿಸಿದ್ದಾರೆ. ಭಾರತದಲ್ಲಿಯೂ ಸಹ ನ್ಯಾಯಾಧೀಶರು ಬಹಳ ಮುಂಚೆಯೇ ನ್ಯಾಯಾಧೀಶರ ನಿಯುಕ್ತಿಯ ದುರಾಸೆಯನ್ನು ವ್ಯಕ್ತಪಡಿಸುವುದು ಅಹಿತವಾದುದನ್ನು ನಯವಾದ ಮಾತುಗಳಿಂದ ವರ್ಣಿಸುವ ರೀತಿಯಾಗಿದೆ. ಈ ವಿಷಯದಲ್ಲಿ ಸಂವಿಧಾನವು ಸ್ಪಷ್ಟವಾಗಿಯೇ ಇದೆ. ಸಂವಿಧಾನ ಪ್ರಕಾರ ನ್ಯಾಯಾಂಗದ ಉನ್ನತ ಸ್ಥಾನಗಳಿಗೆ ನಿಯುಕ್ತಿಯನ್ನು ರಾಷ್ಟ್ರಾಧ್ಯಕ್ಷರು, ಮುಖ್ಯ ನ್ಯಾಯಾಧೀಶರ ಮತ್ತು ಸೂಕ್ತವೆನಿಸಿದ ಇತರ ನ್ಯಾಯಾಧೀಶರೊಂದಿಗೆ ಸಮಾಲೋಚನೆ ನಡೆಸಿ ಮಾಡುವರು. ಸಮಾಲೋಚಿಸುವುದು ಎಂದರೆ ಶರಣಾಗತಿ ಎಂದಾಗಲೀ, ಒಪ್ಪಿಗೆ ಎಂದಾಗಲೀ ಅರ್ಥವಲ್ಲ. ಹೀಗಿದ್ದರೂ ಸಹ ಡಾ|| ಬಿ.ಆರ್. ಅಂಬೇಡ್ಕರ್ ಸಂವಿಧಾನದ 124ನೇ ವಿಧಿಯಲ್ಲಿ ಯಾವ ಆಶಯವನ್ನು ಸ್ಪಷ್ಟವಾಗಿ ತಿಳಿಸಿದ್ದರೋ ಆ ಆಶಯಕ್ಕೆ ವಿರೋಧವಾದ ಅರ್ಥವನ್ನು ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಸಂವಿಧಾನದ 124ನೆ ವಿಧಿಯನ್ನು ಪತ್ತೆ ಹಚ್ಚಿ ಅಂಬೇಡ್ಕರರ ಆಶಯಕ್ಕೆ ವಿರೋಧವಾಗಿ ಆ ವಿಧಿಯನ್ನು ಅರ್ಥೈಸಿದ್ದಾರೆ.

ನ್ಯಾಯಾಂಗದ ಸ್ವಾತಂತ್ರ್ಯವು ಪ್ರಜಾಪ್ರಭುತ್ವಕ್ಕೆ ಮೂಲಭೂತವಾದ ಸಂಗತಿ. ಈ ಮಾತನ್ನು ಮನದಟ್ಟು ಮಾಡಲು ಯಾವುದೇ ನ್ಯಾಯಾಂಗೀಯ ಭಾಷಣಕಲಾ ಬೇಕಾಗಿಲ್ಲ. ಸ್ವತಂತ್ರ ಮತ್ತು ನಿರ್ಭಯವಾದ ನ್ಯಾಯದಾನ ಪದ್ಧತಿ ಇಲ್ಲದೇ ಇದ್ದರೆ ಮಾನವ ಹಕ್ಕುಗಳೆಂಬುದು ಒಂದು ಬಿಸಿಲ್ಗುದುರೆಯೆ ಸರಿ. ಸಂವಿಧಾನದ ಶಿಲ್ಪಿಗಳು ನ್ಯಾಯಾಂಗವನ್ನು ಕಾರ್ಯಾಂಗದಿಂದಲೂ, ಶಾಸಕಾಂಗದಿಂದಲೂ ಅಥವಾ ಇನ್ನು ಯಾವುದೇ ಕ್ಷೇತ್ರದಿಂದಲೂ ರಕ್ಷಿಸಲು ವಾಸ್ತವಿಕವಾಗಿರುವ ಇತಿಮಿತಿಗಳನ್ನು ಗಮನಿಸಿ ಸಾಕಷ್ಟು ಉಪಾಯಗಳನ್ನು ಸೂಚಿಸಿದ್ದಾರೆ. ಸಂವಿಧಾನದ 141, 142 ಮತ್ತು 144ನೇ ವಿಧಿಗಳನ್ನು ಆಶ್ರಯಿಸುವ ದಾರಿಯಲ್ಲದೇ ಬೇರೆ ಯಾವ ಮಾರ್ಗವೂ ನ್ಯಾಯಾಂಗಕ್ಕೆ ಇಲ್ಲ. ಏಕೆಂದರೆ ನ್ಯಾಯಾಂಗದ ಬಳಿ ತನ್ನದೇ ಆದ ಹಣವಾಗಲಿ, ಅಸ್ತ್ರವಾಗಲಿ ಇರುವುದಿಲ್ಲ. ಅದರ ಬಳಿ ಇರುವ ಇನ್ನೊಂದು ಮಾರ್ಗವೆಂದರೆ ನ್ಯಾಯಾಧೀಶರ ನಿವೃತ್ತಿಯ ಕಡ್ಡಾಯ ವಯಸ್ಸು ಮತ್ತು ನ್ಯಾಯಾಂಗ ನಿಂದನೆಯ ವಿರುದ್ಧ ಅಧಿಕಾರ. ಇಂಗ್ಲೆಂಡಿನ ಬಲಶಾಲಿ ಕಾನೂನಿನ ಯಜಮಾನರುಗಳಿಗಿಂತಲೂ ಮತ್ತು ನ್ಯಾಯಾಧೀಶರ ಪೋಷಾಕನ್ನು ಧರಿಸಿರುವ ಅಮೇರಿಕಾದ ಸಹೋದರರಿಗಿಂತಲೂ ಭಾರತದ ನ್ಯಾಯಾಂಗವು ಹೆಚ್ಚು ಸ್ವತಂತ್ರ ವಾಗಿದೆಯೆಂದು ಹೇಳಲು ನನಗೆ ಯಾವ ಸಂಕೋಚವೂ ಇಲ್ಲ. ಇಲ್ಲಿ ಮೂಲಭೂತ ಸಮಸ್ಯೆಯೇನೆಂದರೆ ನ್ಯಾಯಾಂಗದ ಇಡೀ ಕಾರ್ಯ ಸಂವಿಧಾನದ ಸ್ವಾಯತ್ತತೆಯು ನ್ಯಾಯಾಧೀಶರ ನಿಯುಕ್ತಿ ಅಧಿಕಾರವನ್ನು ಹೊಂದಿರುವ ರಾಷ್ಟ್ರಾಧ್ಯಕ್ಷರು ಅಂದರೆ ಪ್ರಧಾನಮಂತ್ರಿಯವರಿಂದ ಪ್ರಭಾವಿತಕ್ಕೊಳಗಾಗುವ ಸನ್ನಿವೇಶವೇನಾದರೂ ಇದೆಯೇ ಎಂಬುದು.

ಸ್ವತಂತ್ರ ಕಾರ್ಯಾಚರಣೆಯನ್ನು ಹೊಂದಿರಬೇಕಾದಂಥ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಹಾಗೂ ಚುನಾವಣಾ ಆಯೋಗಗಳಂಥ ಸಂಸ್ಥೆಗಳು ದೇಶದಲ್ಲಿವೆ. ಆದರೆ ಈ ಸಂಸ್ಥೆಗಳ ಮುಖ್ಯಸ್ಥರನ್ನು ರಾಷ್ಟ್ರದ ಪ್ರಧಾನ ಕಾರ್ಯಾಂಗಾಧಿಕಾರಿಯು ನಿಯುಕ್ತಿ ಮಾಡುತ್ತಾರೆ. ಕಳೆದ 50 ವರ್ಷಗಳಿಂದಲೂ ಭಾರತದಲ್ಲಿ ಉನ್ನತ ನ್ಯಾಯಾಧೀಶರನ್ನು ಮುಖ್ಯ ನ್ಯಾಯಾಧೀಶರೊಂದಿಗೆ ಸಮಾಲೋಚನೆ ನಡೆಸಿ ರಾಷ್ಟ್ರಪತಿಯವರು ಪ್ರಧಾನಮಂತ್ರಿಯವರ ಆಯ್ಕೆಗನುಗುಣವಾಗಿ ನಿಯುಕ್ತಿ ಮಾಡುತ್ತಾ ಬಂದಿದ್ದಾರೆ. ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಹಾಗೂ ಇತರೆ ಕಾರ್ಯಾಧಿಕಾರಿಗಳೆಲ್ಲರೂ ತಮ್ಮ ನಿಯುಕ್ತಿಗಾಗಿ ಪ್ರಧಾನಮಂತ್ರಿ ಮತ್ತು ಮಂತ್ರಿಮಂಡಲಕ್ಕೆ ಆಭಾರಿಯಾಗಿರುವುದರಿಂದ ಅವರು ಸ್ವತಂತ್ರವಾಗಿ ಕಾರ್ಯನಿರ್ವಹಿಸಬಲ್ಲರೆಂದು ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಲಿ ಅಥವಾ ಇನ್ನಾವುದೇ ನ್ಯಾಯಾಧೀಶರಾಗಲಿ ತಿಳಿದುಕೊಳ್ಳಬಹುದೇ? ಆ ರೀತಿ ಅವರು ಏನಾದರೂ ಭಾವಿಸುವುದಾದರೆ ಅದೊಂದು ಅಪನಂಬಿಕೆಯ ವಿಷಯವೆ ಆಗುತ್ತದೆ. ಭಾರತದ ಉಚ್ಚನ್ಯಾಯಾಧೀಶರು ಮತ್ತು ಅವರ ಸಹೋದ್ಯೋಗಿಗಳಿಗೆ ನಿಯುಕ್ತಿಯ ಅಥವಾ ಆಯ್ಕೆಯ ಅಧಿಕಾರವನ್ನು ಕೊಟ್ಟರೆ ಅವರು ಸರ್ಕಾರದ ಹಿತಾಸಕ್ತಿಯನ್ನು ಕಾಪಾಡುವಷ್ಟು ವಿನಮ್ರರಾಗಿರುತ್ತಾರೆಂದು ಅರ್ಥವೆ ? (Second judges Case)ನಲ್ಲಿ ನ್ಯಾಯಾಧೀಶರು ತಮ್ಮ ಬಹುಮತದಿಂದ ದೇಶದ ಮುಖ್ಯ ನ್ಯಾಯಾಧೀಶರಿಗೆ ಪ್ರಾಮುಖ್ಯತೆಯಲ್ಲಿ ಮೊದಲ ಸ್ಥಾನದ ಹಕ್ಕಿರಬೇಕೆಂಬ ತೀರ್ಮಾನವನ್ನು ಕೊಟ್ಟಿದ್ದಾರೆ. ಆದರೆ ಈ ತೀರ್ಮಾನವನ್ನು ಅವರು ಕೊಡುವಾಗ ತಮ್ಮ ನಿಯುಕ್ತಿ ಸಹ ಪ್ರಧಾನ ಮಂತ್ರಿಯವರಿಂದಲೇ ಆಗಿದ್ದಾಗ್ಯೂ ಪ್ರಧಾನಮಂತ್ರಿಯವರ ನಿಷ್ಪಕ್ಷಪಾತತನವನ್ನು ಪ್ರಶ್ನಿಸುವ ಧೈರ್ಯ ಮಾಡಿದರೆಂಬುದನ್ನು ಅವರು ಮರೆತಂತೆ ಅನಿಸುತ್ತದೆ. ಮುಖ್ಯ ನ್ಯಾಯಾಧೀಶರುಗಳು ಸಹ ಮಾನವರೇ ಆಗಿರುವುದರಿಂದ ಅವರನ್ನು ದೈವತ್ವದ ಸ್ಥಾನಕ್ಕೇರಿಸಲು ಸಾಧ್ಯವಿಲ್ಲ. "ಪರಾಮರ್ಶೆ" ಎಂಬ ಪದದ ಅರ್ಥವನ್ನು ಸಾಮಾನ್ಯ ಭಾಷಾ ಕೋಶದ ಅರ್ಥಕ್ಕಿಂತಲೂ ಹಿಗ್ಗಿಸಲಾಗಿದೆ. ಇದೊಂದು ದುರ್ದೈವದ ಸಂಗತಿ. (Second judges Case) ನಲ್ಲಿ ಬಹುಮತದ ನ್ಯಾಯಾಧೀಶರು ಯಾವ ಚಿಂತನೆಯನ್ನು ಹೊಂದಿದ್ದರೊ ಅದನ್ನು ನಾನು ಒಪ್ಪುವುದಿಲ್ಲ. ಅದಕ್ಕಾಗಿ ನಾನು ವಿಷಾದಿಸುತ್ತೇನೆ. ಅವರ ಚಿಂತನೆಯ ಸಾರಾಂಶ ಈ ರೀತಿ ಇದೆ : ಸುಪ್ರಿಂಕೋರ್ಟ್ ಮತ್ತು ಹೈಕೋರ್ಟ್‌ಗಳ ನ್ಯಾಯಾಧೀಶರ ಆಯ್ಕೆ ಮತ್ತು ನಿಯುಕ್ತಿಗಳ ಸಂಬಂಧದಲ್ಲಿ ಸಂವಿಧಾನಾತ್ಮಕ ಪ್ರಕ್ರಿಯೆ ನಡೆದಾಗ ಮತ್ತು ಒಂದು ಹೈಕೋರ್ಟಿನಿಂದ ಇನ್ನೊಂದು ಹೈಕೋರ್ಟಿಗೆ ನ್ಯಾಯಾಧೀಶರ ವರ್ಗಾವಣೆ ಆದಾಗ ಉಚ್ಚ ನ್ಯಾಯಾಧೀಶರಿಗೆ ಪ್ರಾಮುಖ್ಯತೆಯ ಹಕ್ಕು ಇರಬೇಕು ಎಂಬ ಮೇಲ್ಕಾಣಿಸಿದ ತರ್ಕವು ತಮ್ಮ ಸಾಮಾಜಿಕ ತಿಳುವಳಿಕೆಯ ಹಿನ್ನೆಲೆಯಲ್ಲಿ ಕ್ರಿಸ್ತಾನ್ ಧಾರ್ಮಿಕ ವ್ಯವಸ್ಥೆಯಲ್ಲಿ ಪೋಪನಿಗಿರುವ ಸ್ಥಾನದಂತೆಯೆ ಇದು ಸಹ ಎಂದೆನಿಸುತ್ತದೆ.

ಉಚ್ಛನ್ಯಾಯಾಧೀಶರು ನ್ಯಾಯಾಂಗದ ಶ್ರೇಷ್ಠ ಅಧಿಕಾರಿಯಾಗಿರುವುದರಿಂದ ಅತಿ ಪ್ರಾಧಾನ್ಯತೆಯಲ್ಲದಿದ್ದರೂ ಪ್ರಾಮುಖ್ಯತೆಯ ಹಕ್ಕನ್ನು ಹೊಂದಿದ್ದಾರೆ. ಇದು ಸರಿಯಾದ ದಿಕ್ಕಿನತ್ತ ಸರಿಯಾದ ಹೆಜ್ಜೆಯಾಗಿದೆ. ಆ ಒಂದು ಹೆಜ್ಜೆಯು ಸಮಾಜಕ್ಕೆ ಗರಿಷ್ಠ ಪ್ರಮಾಣದ ಪ್ರಯೋಜನಗಳನ್ನು ತಂದುಕೊಡಬಲ್ಲದು. (AIR 1994 SCP-342 Para 211)

ನ್ಯಾಯಾಂಗ ಕ್ಷೇತ್ರದ ಉನ್ನತಾಧಿಕಾರಿಯನ್ನು ಓರ್ವ ಧರ್ಮಾಧಿಕಾರಿಯ ಶ್ರೇಷ್ಠತೆಗೆ ಹೋಲಿಸಿರುವುದನ್ನು ಮತ್ತು ಧರ್ಮಾಧಿಕಾರಿಯು ತಪ್ಪುಗಳನ್ನು ಮಾಡುವುದರಿಂದ ಅತೀತನೆಂದು ಭಾವಿಸುವ ವಿಚಾರವನ್ನು ನಾನು ಒಪ್ಪುವುದಿಲ್ಲ. ನ್ಯಾಯದಾನ ನಮ್ಮ ಇಂದಿನ ಮಾನವ ಹಕ್ಕುಗಳ ಯುಗದಲ್ಲಿ ಅತ್ಯಂತ ಮಹತ್ವದ ವಿಷಯವಾಗಿರುವುದರಿಂದ ನ್ಯಾಯಧೀಶನಾಗಿ ಆಯ್ಕೆಯಾಗುವ ವ್ಯಕ್ತಿಯು ಉತ್ತಮನಾಗಿರಬೇಕಾದುದು ಅವಶ್ಯ. ಸಂವಿಧಾನವು ನ್ಯಾಯದ ವಿಚಾರಕ್ಕೆ ಬಹಳ ಪ್ರಾಮುಖ್ಯತೆಯನ್ನು ಕೊಟ್ಟಿದೆ ಮತ್ತು ನ್ಯಾಯಾಧೀಶರು ಸಂವೈಧಾನಿಕ ಯೋಜನೆಯಲ್ಲಿ ಉನ್ನತ ಸ್ಥಾನವನ್ನು ಪಡೆದಿದ್ದಾರೆ. ಆದ್ದರಿಂದ ನ್ಯಾಯಾಧೀಶರ ನಿಯುಕ್ತಿಯ ಉಪಕ್ರಮವು ಯಾವುದೇ ಕಾರಣಕ್ಕೂ ನ್ಯಾಯ ವಿತರಣೆಯ ಘನತೆಗೆ ಧಕ್ಕೆ ಉಂಟುಮಾಡಕೂಡದು. ಅಮೇರಿಕೆಯಲ್ಲಿ ಅಲ್ಲಿಯ ಅಧ್ಯಕ್ಷನು ಪಾರದರ್ಶಕವಾದ ರಾಜಕೀಯ ಉದ್ದೇಶದಿಂದ ನ್ಯಾಯಾಧೀಶರನ್ನು ಆಯ್ಕೆ ಮಾಡುತ್ತಾನೆ. ಆದರೆ ಅಧ್ಯಕ್ಷನ ಉಮೇದುವಾರನು ಅಲ್ಲಿಯ ಸೆನೆಟ್ ನಡೆಸುವ ಪರೀಕ್ಷೆಯನ್ನು ಎದುರಿಸಬೇಕಾಗುತ್ತದೆ. ಆ ಪರೀಕ್ಷೆ ಆ ಉಮೇದುವಾರನ ದಾಖಲೆಗಳ ಪರಿಶೀಲನೆ ಮತ್ತು ಅವನ ನ್ಯಾಯ ತತ್ವದ ನಂಬಿಕೆಗಳನ್ನು ಒಳಗೊಂಡಿರುತ್ತದೆ. ಈ ವಿಷಯದಲ್ಲಿ ಅಧ್ಯಕ್ಷರಿಗೆ ಮತ್ತು ಸೆನೆಟಿಗೆ ಅಮೇರಿಕನ್ / ಅಸೋಸಿಯೇಷನ್ ನೆರವು ನೀಡುತ್ತದೆ ಮತ್ತು ಅಧ್ಯಕ್ಷರಿಂದ ಆಯ್ಕೆಗೊಳ್ಳಲ್ಪಟ್ಟ ಉಮೇದುವಾರನ ಸಾಮರ್ಥ್ಯ, ಯೋಗ್ಯತೆ ಇತ್ಯಾದಿಗಳ ಮೌಲ್ಯಮಾಪನ ಮಾಡುತ್ತದೆ. ಅಮೇರಿಕಾದ ನ್ಯಾಯಾಧೀಶರ ನಿಯುಕ್ತಿಯು ಈ ಪದ್ಧತಿಯಲ್ಲಿ ಕೆಲವು ಅತೀರೇಕಗಳಿವೆ. ಅವುಗಳನ್ನು ಭಾರತ ಅನುಸರಿಸಬೇಕಾಗಿಲ್ಲ. ಇಂಗ್ಲೆಂಡಿನಲ್ಲಿ ನ್ಯಾಯಾಧೀಶರ ಆಯ್ಕೆ ಯಾವುದೇ ಸಾರ್ವಜನಿಕ ಚರ್ಚೆಯಿಲ್ಲದೆ ಆಗುತ್ತದೆ. ನ್ಯಾಯಾಂಗವು ಸಂವಿಧಾನಾತ್ಮಕವಾದ ಇತರೆ ಕಾರ್ಯಾಧಿಕಾರಿಗಳಿಗಿಂತ ಉನ್ನತವಾಗಿದೆಯೆಂಬುದನ್ನು ನಾನು ಒಪ್ಪುತ್ತೇನೆ. ನ್ಯಾಯಾಂಗದ ಸಂವಿಧಾನಾತ್ಮಕ ಪಾತ್ರವು ವಿವಾದಾತೀತ ಮತ್ತು ಅಳತೆಗೆ ಮೀರಿದುದು ಮತ್ತು ಲೆಖ್ಖಕ್ಕೆ ಸಿಗದಂಥದು ಆಗಿದೆ. ಶಾಸಕಾಂಗ ಮತ್ತು ಕಾರ್ಯಾಂಗಗಳಿಗೆ ಸಂವಿಧಾನವು ನಿಗದಿಪಡಿಸಿರುವ ಕಾರ್ಯಾಭಾರಕ್ಕಿಂತ ಯಾವುದೇ ರೀತಿಯಲ್ಲಿ ನ್ಯಾಯಾಂಗದ ಕಾರ್ಯಭಾರವು ಕಡಿಮೆ ಇಲ್ಲ. ಆದರೆ ನ್ಯಾಯಾಂಗದ ಜವಾಬ್ದಾರಿಯು ಬೇರೆ ವಿಭಾಗಗಳಿಗಿಂತ ಸ್ವಲ್ಪ ಹೆಚ್ಚಿನದೇ ಆಗಿದೆ. ನ್ಯಾಯಾಂಗವು ಪ್ರಜಾಪ್ರಭುತ್ವದ ಕಾವಲುಗಾರನೆಂದೇ ಹೇಳಲಾಗುತ್ತದೆ. ಸಂವಿಧಾನದಲ್ಲಡಗಿರುವ ಅರ್ಥ ವ್ಯಾಪ್ತಿಗಿಂತಲೂ ಹೆಚ್ಚಿನ ರೀತಿಯಲ್ಲಿ ಸಂವಿಧಾನದ ಇತರೆ ಅಂಗಗಳು ಕೆಲಸ ಮಾಡದಂತೆ ನೋಡಿಕೊಳ್ಳುವ

ಜವಾಬ್ದಾರಿ ನ್ಯಾಯಾಂಗದ್ದಾಗಿರುತ್ತದೆ. ನ್ಯಾಯಾಂಗದ ಸದ್ಪರಿಣಾಮ ಮತ್ತು ಅದರ ಸ್ವಾತಂತ್ರ್ಯ ಬಹಳಷ್ಟು ನ್ಯಾಯಾಂಗದ ಮುಖ್ಯಸ್ಥರ ಸಾಮರ್ಥ್ಯವನ್ನೇ ಅವಲಂಬಿಸಿದೆ ಎಂಬ ಸಂಗತಿ ವಿವಾದಾತೀತವಾಗಿದೆ. ಆರೋಗ್ಯಕರವಾದ ಮತ್ತು ಸ್ವತಂತ್ರವಾದ ನ್ಯಾಯಾಂಗ ಇರಬೇಕಾದುದು ಕೂಡ ಅಷ್ಟೇ ಮಹತ್ವದ ಸಂಗತಿಯಾಗಿದೆ. ಏಕೆಂದರೆ ನ್ಯಾಯಾಂಗವು ದುರ್ಬಲವಾದರೆ ಪ್ರಜಾಪ್ರಭುತ್ವವು ಸಹ ದುರ್ಬಲಗೊಳ್ಳುವುದು. (AIR S.C. 1994 P/343/344 Para 217)

ಇದೆಲ್ಲವನ್ನು ಹೇಳಿದ ನಂತರ ಸಂವಿಧಾನವು ನ್ಯಾಯಾಧೀಶರಿಗಿಂತಲೂ ಮೇಲ್ಪಟ್ಟದ್ದು ಎಂಬುದನ್ನು ನ್ಯಾಯಾಧೀಶರು ನೆನಪಿಟ್ಟುಕೊಳ್ಳಬೇಕು. ನ್ಯಾಯಾಂಗಿಯ ನಿಯುಕ್ತಿಗಳನ್ನು ಕೇವಲ ನ್ಯಾಯಾಧೀಶರಿಗೆ ಬಿಟ್ಟುಕೊಡಲು ಸಮಂಜಸವಲ್ಲದಷ್ಟು ಮಹತ್ವದ್ದಾಗಿದೆಯೆಂಬ ಕೂಗು ಎಲ್ಲೆಡೆ ಕೇಳಿ ಬರುತ್ತಿದೆ.

'ಮೇನ್‌ಸ್ಟ್ರೀಮ್ ಸೌಭಾರ' ಸರಿಭಾರ

ಅನು : ಸು.ಕೌ.

◆◆◆◆◆

ಪರಿಸರದ ಉಳಿವಿಗಾಗಿ ಪರ್ಯಾಯ ತಂತ್ರಜ್ಞಾನ ಬೇಕು

- ಯು.ಆರ್. ಅನಂತಮೂರ್ತಿ

ಕುವೆಂಪು ವಿಶ್ವವಿದ್ಯಾಲಯದಲ್ಲಿ ಹಲವು ಕಾರಣಗಳಿಂದಾಗಿ ಕೇವಲ ಔಪಚಾರಿಕವಾದ ಘಟಿಕೋತ್ಸವ ಭಾಷಣವನ್ನು ನಾನು ಮಾಡಲಾರೆ. ಮಲೆನಾಡಿನಲ್ಲಿ ಹುಟ್ಟಿ ಕಲಿತು ಬೆಳೆದವನಾದ ನನಗೆ ಈ ವಿಶ್ವವಿದ್ಯಾಲಯ ವಿಶೇಷವಾದ ಮಹತ್ವದ್ದು. ಇದರ ಮೊದಲ ಕುಲಪತಿ ನನ್ನ ಪ್ರಿಯ ಸ್ನೇಹಿತರಾಗಿದ್ದ ಗತಿಸಿದ ಶಾಂತಿನಾಥ ದೇಸಾಯಿಯವರು. ಈಗಿನ ಕುಲಪತಿಗಳಾದ ಡಾಕ್ಟರ್ ಚಿದಾನಂದ ಗೌಡರು ನನ್ನ ಪಾಲಿಗೆ ಗೌರವಾನ್ವಿತರು; ತಾವು ಕಲಿತ ವಿಷಯದಲ್ಲಿ ತಜ್ಞರು; ವಿಶ್ವವಿದ್ಯಾಲಯದ ನಿರ್ವಹಣೆಯಲ್ಲಿ ಪ್ರಾಮಾಣಿಕರು ಮಾತ್ರವಲ್ಲ; ದಕ್ಷರು. ಇಂಥವರಿಗೆ ಯಾವ ಕಾಲದಲ್ಲಾದರೂ ಒಂದು ವಿಶ್ವವಿದ್ಯಾಲಯದ ಕುಲಪತಿ ಹುದ್ದೆ ದೊರಕುವುದು ವಿಶೇಷವಾದ ಸಂಗತಿಯೇ; ಮಲೆನಾಡಿನ ವಿದ್ಯಾಪರಿಸರಕ್ಕೆ ಇವರ ಕೊಡುಗೆ ಅರ್ಥಪೂರ್ಣವಾಗಲಿ ಎಂದು ಹಾರೈಸುತ್ತೇನೆ.

ಮೇಲಾಗಿ ಇವರು ತಮ್ಮ ಕುಲಪತಿ ಹುದ್ದೆಯ ಮೊದಲ ವರ್ಷದ ಘಟಿಕೋತ್ಸವಕ್ಕೇ ನನ್ನನ್ನು ಕರೆದುಬಿಟ್ಟಿದ್ದಾರೆ. ಈ ಎಲ್ಲ ಭಾವನೆಗಳು ಪ್ರಾಮಾಣಿಕ ಉತ್ಕಟತೆಯಿಂದಲೂ ವಿನಯದಿಂದಲೂ ಕೆಲವು ಮಾತುಗಳನ್ನಾಡುವಂತೆ ನನ್ನನ್ನು ಪ್ರೇರೇಪಿಸಿವೆ.

ಈ ಘಟಿಕೋತ್ಸವದಲ್ಲಿ ತಮ್ಮ ಅಧ್ಯಯನವನ್ನು ಯಶಸ್ವಿಯಾಗಿ ಪೂರೈಸಿ, ಡಿಗ್ರಿಗಳನ್ನು ಪಡೆದು ಮರ್ಯಾದಿತರಾಗುತ್ತಿರುವವರಿಗೆಲ್ಲ ನನ್ನ ಅಭಿನಂದನೆಗಳು. ಪರೀಕ್ಷೆಯ ಆತಂಕ ಮುಗಿಯುತ್ತಿದ್ದಂತೆಯೇ ಜೀವನದ ಪರೀಕ್ಷೆ ನಿಮಗೆ ಎದುರಾಗಲಿದೆ. ಅದರಲ್ಲಿ ಗೆಲುವು ಸೋಲುಗಳು ನೀವೀಗ ಯಶಸ್ವಿಯಾಗಿ ಪೂರೈಸಿದ ಪರೀಕ್ಷೆಯಷ್ಟು ಸ್ಪಷ್ಟವಾಗಿರುವುದಿಲ್ಲ. ಅಲ್ಲದೆ ನಿಮ್ಮ ವೈಯಕ್ತಿಕ ಶಕ್ತಿಗಷ್ಟೇ ಅದು ಸೀಮಿತವೂ ಅಲ್ಲ. ಜಾಗತೀಕರಣ ಗೊಳ್ಳುತ್ತಿರುವ ಇಂದಿನ ಪ್ರಪಂಚ ನಮ್ಮ ತೀರಾ ವೈಯಕ್ತಿಕವಾದ ಆಸೆ ಆಕಾಂಕ್ಷೆಗಳನ್ನೂ ತಿರುಚಬಲ್ಲದಾಗಿದೆ. ಅವಕಾಶವನ್ನು ಕಲ್ಪಿಸುವ ಭ್ರಮೆಯಲ್ಲಿ ಅವಕಾಶಗಳನ್ನು ಸಂಕುಚಿತ ಗೊಳಿಸುವ, ಬಲಿಷ್ಠರಾಷ್ಟ್ರಗಳ ಅಜೆಂಡಾಕ್ಕನುಗುಣವಾಗಿ ಎಲ್ಲರೂ ದುಡಿಯುವಂತೆ ಮಾಡುವ ವ್ಯವಸ್ಥೆಯನ್ನು ಹುಟ್ಟುಹಾಕುತ್ತಿರುವಂತೆ ಕಾಣುತ್ತಿದೆ. ಹೀಗಾಗಕೂಡದೆಂದು ನಾವೆಲ್ಲ ಬಯಸುವುದಾದರೆ ಊರಿನ ನೆಲದಲ್ಲಿ ಊರಿಕೊಂಡಿದ್ದೇ ಜಾಗತಿಕ ಆಕಾಶಕ್ಕೂ ಅನಿವಾರ್ಯವಾಗಿ ತೆರೆದುಕೊಳ್ಳಲೇಬೇಕಾದ ನಮ್ಮ ಸರ್ಕಾರಗಳು, ನಮ್ಮ ವಿದ್ಯಾಸಂಸ್ಥೆಗಳು,

ನಮ್ಮ ರಾಜಕಾರಣಿಗಳು ಹೇಗಿರಬೇಕು ಎಂಬುದನ್ನು ನಾವೆಲ್ಲರೂ ಚಿಂತಿಸಬೇಕಾದ ಪರ್ವಕಾಲದಲ್ಲಿ ನಾವಿದ್ದೇವೆ.

ಮಲೆನಾಡಿನ ಸೀಮಿತ ಪ್ರಪಂಚದಲ್ಲೂ ಹಿಂದೊಂದು ಕಾಲದಲ್ಲಿ ಜಾಗತಿಕ ಪ್ರಜ್ಞೆ ಮೂಡಿಬಂದ ಸಂದರ್ಭವನ್ನು ಕುವೆಂಪು ಹೀಗೆ ಸ್ಮರಿಸುತ್ತಾರೆ : ಮೊದಲ ಮಹಾಯುದ್ಧದ ಕಾಲದಲ್ಲಿ 'ಎಮ್ಡನ್' ಎನ್ನುವ ಹುಡುಗ ಮದ್ರಾಸಿನ ಕಡಲತೀರದಲ್ಲಿ ಹಾರಿಸಿದ ಬಾಂಬಿನಿಂದಾಗಿ ಅಡಿಕೆ ಧಾರಣೆ ಎಷ್ಟು ಕುಸಿಯಿತೆಂದರೆ ಮಲೆನಾಡಿನವರು ಸರ್ವಸ್ವವನ್ನೂ ಕಳೆದುಕೊಂಡು ನಿರ್ಗತಿಕರಾದರಂತೆ. ಮಲೆನಾಡಿನ ಹೊರಗೊಂದು ಜಗತ್ತಿದೆ ಎಂಬ ತಿಳುವಳಿಕೆ ಒಂದು ಭಯಹುಟ್ಟಿಸುವ ಘಟನೆಯ ಮೂಲಕ ನಮ್ಮವರಿಗೆ ಮೂಡಿಬಂತೆಂಬುದು ಈ ಕಾಲಕ್ಕೂ ಅರ್ಥವತ್ತಾದ ರೂಪಕವಾಗಿ ಕಾಣಿಸುತ್ತಿದೆ. ಈಗಂತೂ ಅಡಿಕೆ, ಹತ್ತಿ, ಭತ್ತ, ಕಾಫಿ-ಈ ಎಲ್ಲ ಕೃಷಿ ಉತ್ಪನ್ನಗಳೂ-ಜಗತ್ತಿನ ಬಲಿಷ್ಠರ ಇಷ್ಟಾನುಸಾರ ಮಾರುಕಟ್ಟೆಯಲ್ಲಿ ತಮ್ಮ ಬೆಲೆಯನ್ನು ಕಂಡುಕೊಳ್ಳುತ್ತಿವೆ. ನಾವೇನು ಓದಬೇಕು, ಓದಿ ಏನಾಗಬೇಕು-ಎಲ್ಲವೂ ಜಾಗತಿಕ ಮಾರುಕಟ್ಟೆಯಲ್ಲಿ ನಿರ್ಧರಿತವಾಗುತ್ತಿವೆ. ತನ್ನದೇ ಕನಸುಗಳನ್ನು ಕಾಣಗೊಡದಂತೆ ಸೃಷ್ಟಿಯಾಗುತ್ತಿರುವ ಪ್ರಪಂಚ ನಿಮ್ಮಂತಹ ಎಳೆವಯಸ್ಸಿನ ತರುಣರಿಗಂತೂ ಶಾಪವೇ ಸರಿ.

ನಾವು ಸ್ವತಂತ್ರರಾಗುವ ಮೊದಲು ಜಾಗತಿಕ ಪ್ರಜ್ಞೆಯನ್ನು ನಮ್ಮಲ್ಲಿ ಮೂಡಿಸಿದ ಎಮ್ಡನ್ ಈಗ ಆಕರ್ಷಕವಾಗಿಯೂ ಕಾಣುವಂತೆ ನಮ್ಮ ನಡುವೆಯೇ ಬೀಡುಬಿಟ್ಟಿದೆ. ಈಗ ನಮ್ಮ ಪ್ರತಿನಿತ್ಯದ ಜೀವನ ಅಮೇರಿಕಾದ ಅಧ್ಯಕ್ಷರಾದ ಬುಷ್ ತೆಗೆದುಕೊಳ್ಳುವ ದರ್ಪದ ನಿರ್ಣಯದ ಮೇಲೂ ಸದ್ದಾಂ ಹುಸೇನರ ಹುಚ್ಚು ಮರ್ಜಿಯ ಮೇಲೂ ನಿರ್ಧರಿತವಾಗುವಂತೆ ಕಾಣುತ್ತಿದೆ. ಈ ಅಮೇರಿಕಾದ ಪರಮವಿರೋಧಿಗಳೋ ಕಟುಕ ರಾಕ್ಷಸರು; ಬಿನ್‌ಲಾಡೆನ್‌ರಂತಹ ಮಾನವದ್ವೇಷಿಗಳು. ಆದ್ದರಿಂದ ಯಾರನ್ನೂ ಸಮರ್ಥಿಸಲಾರದಂತೆ, ಇಂದಿನ ಜಗತ್ತಿನ ವಿದ್ಯಮಾನಗಳನ್ನು ನಾವು ನಿಸ್ಸಹಾಯಕರಾಗಿ ನೋಡುವಂತಾಗಿದೆ. ಹಿಂಸೆ ಮತ್ತು ಪ್ರತಿಹಿಂಸೆಯ ವಾತಾವರಣದಲ್ಲಿ ಎಲ್ಲರ ಮನಸ್ಸೂ ಕಿಂಚಿತ್ತಾಗಿ ಎಚ್ಚರ ತಪ್ಪಿದರೂ ಸಾಕು ವಿಷಪೂರಿತವಾಗಬಹುದಾದ ಸಂದರ್ಭದಲ್ಲಿ ನಾವೆಲ್ಲರೂ ಇದ್ದೇವೆ.

ಇಷ್ಟು ಹೇಳಿದ ಮೇಲೂ ಗಮನಿಸಬೇಕಾದ ಸತ್ಯ ಒಂದಿದೆ. ಜಾಗತೀಕರಣವೆನ್ನುವುದು ನಮ್ಮಲ್ಲಿ ಎಷ್ಟು ಆತಂಕಗಳನ್ನು ಹುಟ್ಟಿಸುತ್ತಿದೆಯೋ ಅಷ್ಟೇ ಭರವಸೆಗಳನ್ನೂ ಹುಟ್ಟಿಸುತ್ತಿರುವ ಸಂಗತಿಯಾಗಿದೆ. ನಮ್ಮ ಹೆಬ್ಬಯಕೆಗಳಲ್ಲಿ ಒಂದಾದ ಆಧುನೀಕರಣದ ಹೊಟ್ಟೆಯಲ್ಲೇ ಈ ಜಾಗತೀಕರಣ ಮೈದಾಳಿದೆ. ಈ ಬಗ್ಗೆ ನಾನು ಹಿಂದೊಮ್ಮೆ ಹೇಳಿದ ಮಾತುಗಳನ್ನು ಮತ್ತೆ ಹೇಳಲು ಬಯಸಿ ನಿಮ್ಮ ಕ್ಷಮೆ ಕೋರುತ್ತೇನೆ.

ಇಪ್ಪತ್ತನೇ ಶತಮಾನ ಭಾರತೀಯರಾದ ನಮ್ಮಲ್ಲಿ ಊರಿದ ಮೂರು ಆಸೆಗಳೆಂದರೆ :

ಸಮಾನತೆ; ಮತಾತೀತವಾದ ಆಧ್ಯಾತ್ಮಿಕತೆ; ಐರೋಪ್ಯ ನಾಗರೀಕತೆಯ ಅತ್ಯುತ್ತಮ ಫಲಗಳನ್ನು ಮೈಗೂಡಿಸಿಕೊಳ್ಳಬೇಕೆಂಬ ಆಧುನಿಕತೆ.

ಮಹಾತ್ಮಗಾಂದಿಯವರಿಂದ ಪ್ರೇರಿತವಾದ ಸ್ವಾತಂತ್ರ್ಯ ಸಂಗ್ರಾಮದ ಫಲವಾಗಿ ಸಮಾನತೆಯ ಬಯಕೆಯ ಹೊಟ್ಟೆಯಲ್ಲೇ ಉಳಿದೆರಡು ಆಸೆಗಳೂ ಚಿಗುರಿಕೊಂಡವು. ಆಧುನಿಕತೆಯ ಬಗ್ಗೆ ಗಾಂಧಿಯವರಿಗೆ ಹಲವು ಅನುಮಾನಗಳು ಇದ್ದವು, ನಿಜ. ಆ ಮಾತು ಈಗ ಬೇಡ. ಕುವೆಂಪು, ಬೇಂದ್ರೆ, ಕಾರಂತ ಮುಂತಾದ ಆ ಕಾಲದ ಬರಹಗಾರರಲ್ಲಿ ಈ ಮೂರು ಪ್ರೇರಣೆಗಳೂ ಕೆಲಸ ಮಾಡುತ್ತವೆ. ರಾಮಕೃಷ್ಣ ಪರಮಹಂಸ ಮತ್ತು ಅರವಿಂದರಿಂದ ಪ್ರಭಾವಿತರಾದ ಕುವೆಂಪುರವರಂತೂ ಜಾತಿ ಹುಟ್ಟಿಸುವ ಅಸಮಾನತೆ ವಿರುದ್ಧ ಬಂಡೆದ್ದವರಾದ್ದರಿಂದಲೇ ಅವರಲ್ಲಿ ಮೂಡುವ ಈ ಮೂರು ಬಯಕೆಗಳೂ ಅನನ್ಯವಾದ ಉತ್ಕಟತೆಯನ್ನು ಅವರ ಬರಹಕ್ಕೆ ತರುತ್ತವೆ. ಅವರ ಕನ್ನಡದ ಪ್ರೀತಿಯಿಂದಾಗಿ ಆಧುನಿಕತೆ ಈ ನೆಲದ್ದಾಗುತ್ತದೆ. ಬೇಂದ್ರೆ ಮತ್ತು ಕಾರಂತರ ಬಗ್ಗೆಯೂ ಇದು ನಿಜ. ನಮ್ಮ ಬರಹಗಾರರು ಇವತ್ತಿನ ತನಕವೂ ಎಷ್ಟೇ ಯೂರೋಪಿನಿಂದ ಪ್ರಭಾವಿತರಾದರೂ, ಕನ್ನಡಭಾಷೆಯಿಂದಾಗಿ, ಹಿರಿಯರ ಒಟ್ಟು ಸಂಕಲ್ಪದಿಂದ ದೂರವಾಗದೇ ಉಳಿದಿದ್ದಾರೆ.

ಈಗ ಮಾತ್ರ ಆಧುನಿಕತೆಯ ಬಯಕೆ ನಮ್ಮ ಭಾಷೆಗಳನ್ನೂ, ನಮ್ಮ ನಡಾವಳಿಗಳನ್ನೂ ಅಮೇರಿಕಾದ ಪ್ರೀತಿಯಲ್ಲಿ ಕಳೆದುಕೊಳ್ಳುವ ಅಂಧಾನುಕರಣೆಯಾಗಿ ಬಿಡುವ ಅಪಾಯ ಹೆಚ್ಚಾಗಿದೆ.

ಜಾಗತೀಕರಣದ ಆಧುನಿಕತೆ ಬಡವರ ಭಾರತವನ್ನೂ, ಉಳ್ಳವರ ಇಂಡಿಯಾವನ್ನೂ ಒಂದಕ್ಕೊಂದು ಸಂಬಂಧವಿಲ್ಲವೆನ್ನಿಸುವಂತೆ ಸೃಷ್ಟಿಸತೊಡಗಿದೆ. ಆಧ್ಯಾತ್ಮದ ಹಸಿವಂತೂ ಮಾಯವಾಗಿ ದೇಶಮತೀಯ ಸಂಘರ್ಷಗಳ ನರಕವಾಗಿಬಿಟ್ಟಿದೆ. ಇದಕ್ಕೆ ಕಾರಣ ಸಮಾನತೆಯ ಹಸಿವು ನಮ್ಮ ಲೋಕದಿಂದ ಮಾಯವಾಗಿ, ಕೇವಲ ಮಧ್ಯಮವರ್ಗಕ್ಕೆ ಏರಬೇಕೆನ್ನುವ ಆಸೆ, ಮಧ್ಯಮವರ್ಗಕ್ಕೆ ಏರಿಬಿಟ್ಟವರಲ್ಲಿ ಇನ್ನೂ ಮೇಲೇರಬೇಕೆಂಬ ಆಸೆ ನಮ್ಮ ಉದ್ಧಾರದ ಏಕೈಕ ಹಂಬಲವಾಗಿ ತೋರುವುದೇ ಆಗಿದೆ ಎನ್ನಬಹುದೇನೊ ?

ಕ್ಷಮಿಸಿ-ಒಂದು ಸಹಜವಾದ ಸಾಂಸಾರಿಕವಾದ ಅಭಿವೃದ್ಧಿಯ ಆಸೆಯನ್ನು ಹೀಗೆ ಟೀಕಿಸುವುದು ಅತಿಯಾಯಿತೇನೋ ? ಆದರೆ ನಾವೊಂದು ಸಮುದಾಯವೆನ್ನುವ ಕಲ್ಪನೆಯೇ ಇಲ್ಲದ ಕೇವಲ ಸ್ವಾರ್ಥಿಗಳಾಗಿಬಿಟ್ಟವರ ದೇಶ ದೊಡ್ಡ ಕನಸುಗಳನ್ನು ಕಾಣಲಾರದು ಎಂಬ ಆತಂಕದಲ್ಲಿ ಆಡಿದ ಮಾತಿದು; ಧೋರಣೆಯ ಮಾತೆಂದು ತಾವು ತಿಳಿಯಬಾರದು.

ಭಾರತೀಯರಾದ ನಮ್ಮ ಎಲ್ಲರ-ಅಂದರೆ ಎಲ್ಲ ಬಡವ ಬಲ್ಲಿದರ-ಅಗತ್ಯಗಳನ್ನು ಒಟ್ಟಾಗಿ ಪೂರೈಸಿಕೊಳ್ಳುವಂತೆ, ಅಂದರೆ ಗಾಂಧಿಯವರು ಬಯಸಿದ ಸರ್ವೋದಯಕ್ಕಾಗಿ, ಇಂತಹ ಜಗತ್ತಿನಲ್ಲಿ ದುಡಿಯಬೇಕಾದರೆ ನಮ್ಮ ಒಟ್ಟು ವ್ಯವಸ್ಥೆ ಆರೋಗ್ಯಪೂರ್ಣವೂ ಸಧೃಡವೂ ಆಗಿರಬೇಕು. ದೇಶದ ಒಳ್ಳೆಯ ಮನಸ್ಸುಗಳು ಸಂಕಲ್ಪ ಬಲದ ಜಾಗರಣೆಯ

ಎಚ್ಚರದಲ್ಲಿ ಪೂರ್ಣದೃಷ್ಟಿಗಾಗಿ ಪರಸ್ಪರ ಸಂವಾದ ನಡೆಸುವಂತಾಗಬೇಕು.

ಆದರೆ ನಮ್ಮ ಪ್ರಜಾತಂತ್ರ ಅತಂತ್ರವಾಗಿರುವಂತೆ ಕೆಲವೊಮ್ಮೆ ಭಾಸವಾಗುತ್ತದೆ. ಜನತಂತ್ರಕ್ಕೆ ಆಧಾರಗಳಾಗಿರುವ ಪಾರ್ಲಿಮೆಂಟಿನಲ್ಲೂ ಅಸೆಂಬ್ಲಿಗಳಲ್ಲೂ ಎದುರಾಳಿಯ ಮನಸ್ಸನ್ನು ಗೆಲ್ಲಬಲ್ಲ ವಾಕ್‌ಶಕ್ತಿಗೆ ಬದಲಾಗಿ, ಒಬ್ಬರ ಬಾಯಿಯನ್ನು ಇನ್ನೊಬ್ಬ ಮುಚ್ಚಿಸುವಂತಹ ಚೀರಾಟಗಳೇ ಕೇಳಿಸತೊಡಗಿವೆ. ಭಾಷೆಯ ಸಂವಹನ ಶಕ್ತಿಯಲ್ಲಿ ನಮ್ಮ ನಂಬಿಕೆ ಹೋಗಿರುವಂತೆ ಕಾಣುತ್ತಿದೆ. ಆಡುವ ಮಾತಿಗೆ ಬೆಲೆಯೇ ಇಲ್ಲದಂತೆ ನಾವು ಹೇಳುವುದೇ ಒಂದು; ಮಾಡುವುದು ಮತ್ತೊಂದು. ಭ್ರಷ್ಟಾಚಾರ ನಮ್ಮ ಎಲ್ಲ ಸಂಸ್ಥೆಗಳನ್ನೂ ಕಾಡುತ್ತಿದೆ. ಈ ಬಗ್ಗೆ ವಿದ್ಯಾವಂತರಾದ ನಾವು ಕೇವಲ ಮಾತಾಡುತ್ತೇವೆ; ಆದರೆ ಏನೂ ಮಾಡಲಾರದೆ ನಮ್ಮ ಸಣ್ಣಪುಟ್ಟ ಕೆಲಸಗಳನ್ನು ಲಂಚಕೊಟ್ಟು ಮಾಡಿಸಿಕೊಂಡು ಆಮೇಲೆ ಗೊಣಗುತ್ತೇವೆ. ಎಲ್ಲಕ್ಕಿಂತ ಭಯಂಕರವಾದ ಸಂಗತಿಯೆಂದರೆ ನಮ್ಮ ಜೀವನವನ್ನೇ ಅಲ್ಲಾಡಿಸಿದ ಘೋರವಾದ ಹಿಂಸಾಚಾರದ ಅಪರಾಧಗಳನ್ನೂ ನಾವು ಬಹುಬೇಗ ಮರೆತುಬಿಡುತ್ತೇವೆ. ಸ್ಮೃತಿಯೇ ಇಲ್ಲದ ನಾವು ಚರಿತ್ರೆಯಿಂದ ಏನನ್ನಾದರೂ ಕಲಿಯುವುದು ಸಾಧ್ಯ ?

ಆಧುನಿಕ ಭಾರತದಲ್ಲಿ ಎದ್ದು ಕಾಣುವ ದೋಷವೆಂದರೆ ಸಮಷ್ಟಿಗೆ ಸಂಬಂಧಿಸಿದಂತೆ, (ಅಂದರೆ ನಾವು ಒಂದು ದೇಶ ಎನ್ನಿಸುವಂತೆ) ವ್ಯಕ್ತಿ ವ್ಯಕ್ತಿಯಲ್ಲೂ ಇರಬೇಕಾದ ಶೀಲದ ಅಭಾವ. ನಮ್ಮ ಅಲ್ಪ ಸ್ಮೃತಿಗೂ ಇದೇ ಕಾರಣವಿರಬಹುದು. ಕೊಟ್ಟ ಮಾತಿಗೆ ಹಿಂದಿನ ಕಾಲದಲ್ಲಿ ಬೆಲೆಯಿತ್ತು. ಈಗ ಇಲ್ಲ. ರಾಜ್ಯಾಂಗಕ್ಕೆ ಬದ್ಧನಿದ್ದೇನೆಂದು ಪ್ರಮಾಣಮಾಡಿದ ಒಬ್ಬ ಮುಖ್ಯಮಂತ್ರಿ ಬಾಬರಿ ಮಸೀದಿ ಕೆಡಹುವಾಗ ಕಣ್ಣುಮುಚ್ಚಿದಂತೆ ತೋರಿದರೆ, ಇನ್ನೊಬ್ಬರು ಗುಜರಾತಿನ ಮಾರಣಹೋಮದಲ್ಲಿ ರಾಜಧರ್ಮ ಮರೆತವರಂತೆ ನಮ್ಮ ಪ್ರಧಾನಿಗೇ ತೋರಿದರು. ಈಗ ಚುನಾವಣೆಯಲ್ಲಿ ಅವರು ಗೆದ್ದಿದ್ದಾರೆ ಕೂಡ. ನಮ್ಮ ನೈತಿಕಪ್ರಜ್ಞೆ ಪಾತಾಳಮುಟ್ಟಿದಂತೆ ತೋರುತ್ತಿದೆ.

ದೇಶದ ವಿಭಜನೆಯ ಕಾಲದಲ್ಲಿ ಪಾಕಿಸ್ತಾನದಲ್ಲೂ ಭಾರತದಲ್ಲೂ ಕೋಮು ಗಲಭೆಗಳಾಗಿ ಜನ ಸತ್ತರು; ಹಿಂದೂಗಳೂ ಸತ್ತರು; ಮುಸ್ಲಿಮರೂ ಸತ್ತರು. ಕೊಂದವರಿಗೆ ಎರಡು ದೇಶಗಳಲ್ಲೂ ಶಿಕ್ಷೆಯಾಗಲಿಲ್ಲ. ಇದನ್ನು ನಾವು ಎಂದೋ ಮರೆತಾಯಿತು. ಶ್ರೀಮತಿ ಇಂದಿರಾಗಾಂಧಿಯವರ ಕೊಲೆಯಾದ ನಂತರ ದೆಹಲಿಯಲ್ಲಿ ಸಿಖ್ ಜನಾಂಗದವರ ಕೊಲೆಯಾಯಿತು. ಆದರೆ ಕೊಂದವರು ಶಿಕ್ಷೆಗೆ ಒಳಗಾಗಲಿಲ್ಲ. ಅದನ್ನೂ ನಾವು ಮರೆತಾಯಿತು. ಗೋಧ್ರಾದಲ್ಲಿ ಕಗ್ಗೊಲೆಯಾಯಿತು; ಕೊಂದವರಿಗೆ ಶಿಕ್ಷೆಯಾಗುವುದರ ಬದಲು ಅಮಾಯಕರು ಸತ್ತರು. ಇದನ್ನೂ ನಾವು ಮರೆತಂತೆ ತೋರುತ್ತದೆ. ಮುಸ್ಲಿಮ್ ಯುವಕನೊಬ್ಬನನ್ನು ಸನ್ಮಾನ್ಯ ಮುಖ್ಯಮಂತ್ರಿ ಮೋದಿಯವರು ಕ್ಷಮಿಸಿದ ಚಿತ್ರ ಎಲ್ಲ ಪತ್ರಿಕೆಗಳಲ್ಲೂ ಪ್ರಕಟವಾಗಿದೆ. ಶ್ರೀ ಮೋದಿಯವರನ್ನು ಖಂಡಿಸುತ್ತಿದ್ದ ಸೆಕ್ಯುಲರ್

ಎಂದುಕೊಳ್ಳುವ ಪತ್ರಿಕೆಗಳೇ ಇನ್ನು ಮುಂದಿನ ದಿನಗಳಲ್ಲಿ ಅಂತಹವರನ್ನು ಸುದ್ದಿಯ ಆಕರ್ಷಣೆಗಾಗಿ ಹೆಚ್ಚಿಸುತ್ತ ಹೋದಾರು. ಪತ್ರಿಕೆಗಳಿಗೆ ಬೇಕಾಗಿರುವುದು ಅಚ್ಚರಿ ಹುಟ್ಟಿಸುವ ಸುದ್ದಿ. ಮಾತಿಗೆ ಅತೀತವಾದ ಮೌನದಲ್ಲಿ ನಾವು ನಮ್ಮ ಸಂಕಟಗಳನ್ನು ಎದುರಿಸಲಾರದವರಾಗುತ್ತಿದ್ದೇವೆ. ಗಾಂಧಿಯವರ ಮೌನಕ್ಕಿದ್ದ ಸಂವಹನ ಶಕ್ತಿ ನಮ್ಮ ಎಲ್ಲ ಅರಚಾಟಗಳಿಗೆ ಇರಲಾರದು ಎಂಬ ಪರಿವೆಯೇ ನಮಗೆ ಇಲ್ಲವಾಗಿದೆ. ಹುತ್ತದೊಳಗಿನ ತಪದಲ್ಲಿ ರಾಮಾಯಣದ ದಾರ್ಶನಿಕನಾದ ವಾಲ್ಮೀಕಿಯ ಬಗ್ಗೆ ಕವಿ ಅಡಿಗರ ಒಂದು ಸಾಲು ನೆನಪಾಗುತ್ತದೆ: ಹುತ್ತಗಟ್ಟದೆ ಮತ್ತೆ ಚಿತ್ತಕೆತ್ತೀತೇನು/ ಪುರುಷೋತ್ತಮನ ಆ ಅಂಥ ರೂಪು ರೇಖೆ ?

ಅಪರಾಧಕ್ಕೆ ತಕ್ಕ ಶಿಕ್ಷೆಯಾದೀತೆಂಬ ನಂಬಿಕೆ ಜನರಲ್ಲಿ ಇರುವಂತೆ ಕಾಣುವುದಿಲ್ಲ. ಆದ್ದರಿಂದ ಜನರೇ ಸಮೂಹಸನ್ನಿಯಲ್ಲಿ ತಾವು ದ್ವೇಷಿಸುವವರನ್ನು ಶಿಕ್ಷಿಸಲು ತೊಡಗುತ್ತಾರೆ. ಕೊಲ್ಲುತ್ತಾರೆ, ಸಾಯುತ್ತಾರೆ, ಇದನ್ನೆಲ್ಲ ಕಂಡು ಒಂದು ಕ್ಷಣ ಬೊಬ್ಬೆಯಿಟ್ಟು, ಆಮೇಲೆ ಮರೆತು ಯಥಾಪ್ರಕಾರ ನಾವು ಮ್ಮ ಬದುಕನ್ನು ನಡೆಸುತ್ತೇವೆ.

ಪ್ರತಿನಿತ್ಯ ನಾವು ಭ್ರಷ್ಟಾಚಾರಿಗಳಾದ ಅಧಿಕಾರಿಗಳನ್ನು ಪ್ರತ್ಯಕ್ಷ ಹಿಡಿದು ಹಣವಶಪಡಿಸಿಕೊಂಡ ಘಟನೆಗಳ ಬಗ್ಗೆ ಓದುತ್ತೇವೆ. ಆದರೆ ಈ ಅಧಿಕಾರಿಗಳಿಗೆ ಶಿಕ್ಷೆಯಾಗಬಹುದೆಂಬ ಭರವಸೆ ಜನರಿಗೆ ಇಲ್ಲ.

ಈ ಎಲ್ಲದರ ಪರಿಣಾಮವೆಂದರೆ: ನಾವು ಸಿನಿಕರಾಗುತ್ತಿದ್ದೇವೆ. ಇಲ್ಲೇ, ಈ ನಮ್ಮ ನಾಡಿನಲ್ಲೇ ನಮ್ಮ ಬದುಕು ನಮ್ಮ ಕೈಯಲ್ಲಿ ಇಲ್ಲವೆಂದಮೇಲೆ ಜಾಗತೀಕರಣವನ್ನು ನಾವು ನಮ್ಮ ಹಿತಕ್ಕೆ ತಕ್ಕಂತೆ ನಿರ್ವಹಿಸುತ್ತೇವೆಂಬ ಭರವಸೆ ಹುಟ್ಟುವುದಾದರೂ ಹೇಗೆ ?

* * *

ಗೃಹಿಣಿಯರಿಗೆ ಗೊತ್ತಿರುವ ದೊಡ್ಡ ಸತ್ಯವೊಂದಿದೆ: ಮನೆಯನ್ನು ನಿತ್ಯ ಗುಡಿಸದೇ ಬೇರೆ ಮಾರ್ಗವಿಲ್ಲ. ಯಾಕೆಂದರೆ ನಿತ್ಯ ಧೂಳು ತುಂಬಿಯೇ ತುಂಬುತ್ತದೆ. ಲೌಕಿಕದ ಈ ನಿತ್ಯ ಕಾಯಕವನ್ನು ವಿದ್ಯಾವಂತರಾದ ನಾವು ಮರೆತಿರುವಂತೆ ತೋರುತ್ತದೆ. ಈ ಸರ್ವತ್ರ ಗುಡಿಸುವ ಕೆಲಸಕ್ಕೆ ಮುಂದಾಗುವ ಜಯಪ್ರಕಾಶನಾರಾಯಣರು ನಮ್ಮ ನಡುವೆ ಈಗ ಇಲ್ಲವೆನ್ನುವುದು ಸುಮ್ಮನಿದ್ದು ಸಹಿಸಲು ನಮಗೆ ಕಾರಣವಾಗಬಾರದು. ನಮಗಿರುವುದು ಈ ಬದುಕು ಮಾತ್ರ ಎಂದೇ ತಿಳಿದು ಅನ್ಯಾಯವನ್ನು ಸಹಿಸದ ಜನ ನಾವಾಗಬೇಕು; ಯುವಜನರಲ್ಲಿ ಈ ಜಾಗೃತಿ ಮೊದಲು ಮೂಡಬಹುದು ಎಂದು ಚರಿತ್ರೆಯಿಂದ ತಿಳಿದು ನಾವು ಭರವಸೆಯಲ್ಲಿ ಬದುಕುತ್ತಿದ್ದೇವೆ. ಭಾರತೀಯರ ಪರಂಪರಾಗತವಾದ ಸಹನಶಕ್ತಿಗೂ ಒಂದು ಮಿತಿಯಿರಬಹುದು ಎಂಬುದೇ ಈ ಭರವಸೆ.

ಇದಕ್ಕಿಂತ ಹೆಚ್ಚು ಹೇಳಬಾರದು. ನಮ್ಮ ಕಾಲದ ಕಷ್ಟಗಳನ್ನು-ಎರಡೂ ಬಗೆಯ

ಕಷ್ಟಗಳನ್ನು-ನಮ್ಮ ಮೇಲೆ ಜಗತ್ತಿನ ವಿದ್ಯಮಾನಗಳು ನಮ್ಮನ್ನು ಮೀರಿ ಹೇರುವ ಕಷ್ಟಗಳನ್ನು ಮತ್ತು ನಮ್ಮ ಶೀಲದ ಅಭಾವದಿಂದ ಹುಟ್ಟಿಕೊಳ್ಳುವ ಕಷ್ಟಗಳನ್ನು-ಎದುರಿಸಬೇಕಾದ ನಾವು ಗಟ್ಟಿಯಾಗಬೇಕು. ಮನುಷ್ಯ ಗಟ್ಟಿಯಾಗುವುದು ಇತರರ ಸಂಸರ್ಗದಲ್ಲಿಹೇಗೋ ಹಾಗೆಯೇ ಏಕಾಂತದ ಮೌನದಲ್ಲಿ. ಒಳದನಿಗೆ ಕಿವಿಕೊಡುವ ಎಚ್ಚರ, ಇತರರ ಸಂಸರ್ಗದಲ್ಲಿ ಒದಗುವ ಸಂವಾದಕ್ಕೆ ತೆರೆದುಕೊಳ್ಳುವ ಸೂಕ್ಷ್ಮವಾದ ಮುಕ್ತ ಮನಸ್ಸು, ನಮಗೆ ಗೊತ್ತಿರದ ವಿಷಯಗಳ ಬಗ್ಗೆ ತಿಳಿಯಬೇಕೆನ್ನುವ ಸದಾ ಕಲಿಯುವ ಕುತೂಹಲ-ಇವೇ ನಮ್ಮ ಜೀವನದುದ್ದಕ್ಕೂ ನಮ್ಮನ್ನು ಗಟ್ಟಿಯಾಗಿ ಬೆಳೆಸುತ್ತ ಹೋಗುವ ಗುಣಗಳು. ವಿರೋಧದಂತೆ ಕಂಡರೂ ಈ ಗಟ್ಟಿತನದಲ್ಲಿ ಒಂದು ವಿಶೇಷವಿದೆ : ಸದಾ ಸ್ಪಂದನಶೀಲನಾಗಿ, ನಾಚುವ ಸ್ವಭಾವದವರಾಗಿ ಯಾರು ಮೃದುವಾಗಿ ಉಳಿದಿರುತ್ತಾರೋ ಅವರೇ ಗಟ್ಟಿಯಾದ ವ್ಯಕ್ತಿತ್ವವುಳ್ಳವರೂ ಆಗಿರುತ್ತಾರೆ.

ಸದಾ ವಿದ್ಯಾರ್ಥಿಯಾಗಿ ಉಳಿಯಬೇಕಾದ ಅಧ್ಯಾಪಕರ ಬಗ್ಗೆ ಹೇಳಬೇಕಾದ ಒಂದು ಮಾತಿದೆ. ಬ್ಲೇಕ್ ಹೇಳುವ ಮಾತಿದು. You do not know enough, if you do not know more than enough. ಸಾಕಷ್ಟು ತಿಳಿದಿರಬೇಕೆಂದರೆ, ಅಗತ್ಯಕ್ಕಿಂತ ಅಧಿಕವಾಗಿ ತಿಳಿದಿರಬೇಕು. ಇದೂ ಇನ್ನೊಂದು ಕೆಲಸ ಎಂದು ಮಾತ್ರ ತಿಳಿಯುವ ಜಾಣರು ಕೂಡ ಅಧ್ಯಾಪಕರಾಗಲು ಅರ್ಹರಲ್ಲ. ಒಂದು ವಿಶ್ವವಿದ್ಯಾಲಯದ ಘನತೆ ಇರುವುದು ಅದರ ದೊಡ್ಡ ಕಟ್ಟಡಗಳಲ್ಲಿ ಅಲ್ಲ; ಅದರ ಅಧ್ಯಾಪಕರಲ್ಲಿ, ಇಂಥವರ ಶಿಷ್ಯ ನಾನು ಆಗಿದ್ದೆ ಎನ್ನುವುದನ್ನು ಬದುಕಿನ ಎಲ್ಲ ಹಂತಗಳಲ್ಲೂ ವಿದ್ಯಾರ್ಥಿಗಳು ನೆನಪಿಟ್ಟಿರುತ್ತಾರೆ.

ಆದ್ದರಿಂದ ಅಧ್ಯಾಪಕರ ಆಯ್ಕೆಯಲ್ಲಿ ನಿಷ್ಠುರವಾಗಿರಬೇಕು. ಹತ್ತೋ ಹದಿನೈದೋ ನಿಮಿಷಗಳ ಇಂಟರ್‌ವ್ಯೂನಲ್ಲಿ ಗೊತ್ತಾಗುವ ಸಂಗತಿಯಲ್ಲ ಇದು. ಅಮೆರಿಕಾದ ಕೆಲವು ವಿಶ್ವವಿದ್ಯಾಲಯಗಳು ಹುಡುಕುವಂತೆ ನಾವು ಒಳ್ಳೆಯ ಅಧ್ಯಾಪಕರಿಗಾಗಿ ಹುಡುಕಬೇಕು. ಪ್ರತಿ ಅಭ್ಯರ್ಥಿಯೂ ಕನಿಷ್ಟ ಒಂದು ಇಡೀ ದಿನದ ಶೋಧನೆಗೆ ಅಲ್ಲಿ ಒಳಪಡುತ್ತಾನೆ; ಇಡೀ ಇಲಾಖೆ ತನ್ನ ಸಲಹೆಗಳನ್ನು ಯೂನಿವರ್ಸಿಟಿಯ ವರಿಷ್ಠರಿಗೆ ಕೊಡುತ್ತದೆ. ಅಂತಹ ಕ್ರಮಗಳನ್ನು ನಾವು ರೂಢಿಸಿಕೊಳ್ಳುವಂತಾಗಬೇಕು.

ಕುವೆಂಪು ವಿಶ್ವವಿದ್ಯಾಲಯದ ಬಗ್ಗೆ ನನ್ನದೊಂದು ಆಸೆಯಿದೆ. ಈಚೆಗೆ ಎಲ್ಲರೂ ಎಂಜಿನಿಯರಿಂಗಿಗೋ, ಮೆಡಿಕಲ್‌ಗೋ ಸೇರುವುದೇ ಹೆಚ್ಚು. ಹಿಂದಿನ ಬಿ.ಎ. ಮತ್ತು ಬಿ.ಎಸ್ಸಿಗಳು ಈಚೆಗೆ ಕೃಷವಾಗಿ ನರಳುತ್ತಿವೆ. ಹೊಸ ಅಧ್ಯಾಪಕರ ನೇಮಕವೇ ಆಗುತ್ತಿಲ್ಲ: ಭೌತಶಾಸ್ತ್ರ, ಜೀವಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ, ಸಾಹಿತ್ಯ, ತತ್ವಶಾಸ್ತ್ರ ಇತ್ಯಾದಿ ಜ್ಞಾನಮೂಲವಾದ ಶಿಸ್ತುಗಳು ಬೆಳೆಯದಿದ್ದರೆ ನಮ್ಮ ತಂತ್ರಜ್ಞಾನವೂ ಬೆಳೆಯದೆ ಅಲ್ಪವಾಗಿ ಬಿಡುವ ಸಂಭವವಿದೆ. ಈಗ ಇರುವ ಕಾಲೇಜುಗಳಲ್ಲೇ ಅಷ್ಟಿಷ್ಟು ಶಿಸ್ತಿನಲ್ಲಿ ವಿಜ್ಞಾನವನ್ನು ಹೇಳಿಕೊಡುವಷ್ಟೂ ಶ್ರದ್ಧೆಯಿಂದ ಮಾನವಿಕ ಶಾಸ್ತ್ರಗಳನ್ನು ಹೇಳಿಕೊಡುತ್ತಿಲ್ಲ.

ಚರಿತ್ರೆಯನ್ನೋ ಸಾಹಿತ್ಯವನ್ನೋ ಸಮಾಜಶಾಸ್ತ್ರವನ್ನೋ ಸೃಜನಶೀಲವಾಗಿ ಕಲಿಸುವ ಕಾಲೇಜುಗಳೇ ಕರ್ನಾಟಕದಲ್ಲಿ ಇಲ್ಲವೆನ್ನಬಹುದು. ಸೃಜನಶೀಲವಲ್ಲದಿದ್ದರೂ ಶಿಸ್ತಾಗಿ ಕಲಿಸುವ ಕಾಲೇಜುಗಳು ಕೆಲವಾದರೂ ದೆಹಲಿಯಲ್ಲಿ ಮಾತ್ರ ಇವೆ. ನಾವು ಎದುರಿಸುತ್ತಿರುವ ಚರಿತ್ರೆಯ ಬಿಕ್ಕಟ್ಟುಗಳಿಗೆ ಅರ್ಥಪೂರ್ಣವಾಗಿ ಸ್ಪಂದಿಸಲು ಮಾನವಿಕ ವಿಭಾಗಗಳು ಬೆಳೆಯಬೇಕು. ನಮ್ಮ ಧೀಮಂತ ಸಾಹಿತಿಯಾದ ಕುವೆಂಪುರವರ ಹೆಸರನ್ನು ಹೊತ್ತ ಈ ವಿಶ್ವವಿದ್ಯಾಲಯವಾದರೂ ಮಾನವಿಕ ವಿಭಾಗಗಳನ್ನು ಸೃಜನಶೀಲವಾಗಿ, ದಿಟ್ಟವಾಗಿ, ನಿರ್ಭಯವಾಗಿ ವೈಚಾರಿಕ ಮಂಥನವಾಗುವಂತೆ ಬೆಳೆಸಲಿ, ಮತ್ತು ಅದರ ಅಧೀನದಲ್ಲಿರುವ ಕಾಲೇಜುಗಳು ಬೆಳೆಯುವಂತೆ ಶ್ರಮಿಸಲಿ ಎಂದು ಹಾರೈಸುತ್ತೇನೆ.

ನಾನು ಓದಿದ್ದು, ನನ್ನ ಪ್ರಜ್ಞೆಯನ್ನು ಬೆಳೆಸಿಕೊಂಡಿದ್ದು ಆಗಿನ ಶಿವಮೊಗ್ಗ ಇಂಟರ್ ಮೀಡಿಯೇಟ್ ಕಾಲೇಜಿನಲ್ಲಿ; ನಾನು ಅಧ್ಯಾಪಕನಾಗಿ ಪಾಠಮಾಡಲು ಕಲಿತದ್ದೂ ಅಲ್ಲೇ. ಆದ್ದರಿಂದ ಒಂದು ವ್ಯೆಯಕ್ತಿಕ ತುರ್ತಿನಿಂದ ಮೇಲಿನ ಮಾತುಗಳನ್ನು ಹೇಳಿದ್ದೇನೆ.

ಕುವೆಂಪು ವಿಶ್ವವಿದ್ಯಾಲಯ ಮಲೆನಾಡಿನ ಪರಿಸರದ ಬಗ್ಗೆ ತಕ್ಕಷ್ಟು ಕಾಳಜಿಯನ್ನು ತೋರುತ್ತಿದೆ. ಕುದುರೆಮುಖದ ಗಣಿಗಾರಿಕೆಯನ್ನು ವಿರೋಧಿಸಿ ಶಿವಮೊಗ್ಗದಲ್ಲಿ ಆಚರಿಸಲಾದ ಅಪೂರ್ವ ದಾಖಲೆಯ ಬಂದ್ ಅನ್ನು ನಾನಿಲ್ಲಿ ಕೃತಜ್ಞತೆಯಿಂದ ನೆನೆಯುತ್ತೇನೆ. ಕುವೆಂಪು ವಿಶ್ವವಿದ್ಯಾಲಯದ ಕೆಲವು ಅಧ್ಯಾಪಕರು ಈ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡ ಪ್ರಾಮಾಣಿಕತೆಯನ್ನೂ ಸ್ಮರಿಸುತ್ತೇನೆ. ಮಲೆನಾಡಿನ ಪರಿಸರವೇ ಒಂದು ದೊಡ್ಡ ಆಸ್ತಿ. ಕುವೆಂಪುವನ್ನು ಸೃಷ್ಟಿಸಿದ್ದು ಈ ಪರಿಸರ. ಆದ್ದರಿಂದ ಅವರ ಹೆಸರನ್ನು ಹೊತ್ತ ಈ ವಿಶ್ವವಿದ್ಯಾಲಯ ಮಲೆನಾಡಿನ ಪರಿಸರದ ಕಾವಲುಗಾರನಾಗಬೇಕು. ಅಷ್ಟೇ ಅಲ್ಲ: ನಾವು ಆಧುನಿಕವಾದ ತಂತ್ರಜ್ಞಾನವಿಲ್ಲದೆ ಬದುಕುವುದೂ ಸಾಧ್ಯವಿಲ್ಲವಾದ್ದರಿಂದ ಇಲ್ಲಿನ ವಿಜ್ಞಾನಿಗಳೂ ತಂತ್ರಜ್ಞರೂ ಪರಿಸರಕ್ಕೆ ಹಾನಿಕರವಲ್ಲದ ಜನೋಪಯೋಗಿಯಾದ ಪರ್ಯಾಯ ತಂತ್ರಜ್ಞಾನದ ಶೋಧನೆಯಲ್ಲಿ ತೊಡಗಿ ಇಡೀ ವಿಶ್ವದಲ್ಲೇ ಹೊಸ ದಾಖಲೆ ನಿರ್ಮಿಸಬೇಕು. ಗುಡ್ಡಬೆಟ್ಟ ಕಾಡುಗಳ ಹಲವು ಜಾತಿಯ ಪ್ರಾಣಿಗಳ ಜೈವಿಕ ವೈವಿಧ್ಯದ ಈ ಪರಿಸರ ಅಂತಹ ಒಂದು ಸವಾಲನ್ನು ಎಲ್ಲ ಚಿಂತನಶೀಲರಿಗೆ ಒಡ್ಡುತ್ತದೆ. ಈ ಸವಾಲನ್ನು ಎದುರಿಸುವಂತೆ ಕುವೆಂಪು ವಿಶ್ವವಿದ್ಯಾಲಯ ಬೆಳೆಯಲಿ ಎಂದು ನಾನು ಹಾರೈಸುತ್ತೇನೆ.

'ಮೇನ್‌ಸ್ಟ್ರೀಮ್ ಸೌಭಾರ' ಸರಿಭಾರ

ಅನು : ಸು.ಕಾ.

◆◆◆◆◆

ಸಿಂದೂಳ್ಳಿಯ ಕನ್ನಡ ಸೌರಭ ಎಪ್ಪತ್ತರ ಬಿ.ಎ. ಸನದಿ

- ಡಾ|| ಜಿ.ಆರ್. ಉಪಾಧ್ಯ

ಸ್ವಾತಂತ್ರ್ಯೋತ್ತರ ಕನ್ನಡ ವಾಙ್ಮಯದ ಪ್ರಮುಖ ಸಾಹಿತಿಗಳಲ್ಲಿ ಬಿ.ಎ. ಸನದಿ ಅವರೂ ಒಬ್ಬರು. ನಮ್ಮ ಸಮಕಾಲೀನ ಕವಿಗಳಾದ ಜಿ.ಎಸ್. ಶಿವರುದ್ರಪ್ಪ, ಚನ್ನವರ ಕಣವಿ ಅವರ ಸಾಲಿನಲ್ಲಿ ಕೇಳಿ ಬರುವ ಮತ್ತೊಂದು ಹೆಸರು ಕವಿ ಸನದಿ ಅವರದು. ಕನ್ನಡದ ಉದಾರವಾದಿ ಕಾವ್ಯ ಕವಲಿನ ಪ್ರಮುಖ ವಕ್ತಾರರಾಗಿರುವ ಸನದಿ ಅವರದು ಜನಪರ ಧೋರಣೆ, ಜೀವನ ಪರ ನಿಲುವು. ಎಪ್ಪತ್ತರ ದಶಕದಲ್ಲೇ 'ಜನಕಾವ್ಯ' ಎಂಬ ಪರಿಕಲ್ಪನೆಯನ್ನು ಹುಟ್ಟು ಹಾಕಿದ ಈ ಕವಿ ನಾಳಿನ ಜನಕಾವ್ಯವು ಯಾವೊಂದು ಜಾತಿ ಮತದ ಶ್ರುತಿಯಾಗದೆ ಇಡಿ ಜನಸಮುದಾಯದ ಜಾಗೃತ ಚೇತನದ ಫಲಶ್ರುತಿಯಾಗಿ ಹೊರ ಹೊಮ್ಮುತ್ತದೆ ಎಂಬ ಸಮಾಜದ ಮುಖಿಯಾದ ಧೀರೋದಾತ್ತ ಆಶಾವಾದವನ್ನು ಎತ್ತಿ ಹಿಡಿದವರು. ಪರಿಸರದ ಮಣ್ಣಿಗೆ ಅಂಟಿ ಕೊಂಡವರ ಜನಬದುಕಿನೊಂದಿಗೆ ನಡೆಸಿದ ಸಂವಾದ ಹಾಗೂ ಮುಖಾಮುಖಿಯ ದಟ್ಟವಾದ ವಿವರಗಳ ಚಿತ್ರಣ ಕಾಣಸಿಗುತ್ತದೆ.

1993 ಆಗಸ್ಟ್ 18 ರಂದು ಬೆಳಗಾವಿ ಜಿಲ್ಲೆಯ ಸಿಂದೊಳ್ಳಿಯಲ್ಲಿ ಜನಿಸಿದ ಸನದಿ ಅವರ ಜೀವನ ಸಾಧನೆ ಒಂದು ದೊಡ್ಡ ಸಾಹಸ ಗಾಥೆ. ಅವರು ಪಟ್ಟಪಾಡು, ಅದು ಕಾವ್ಯದಲ್ಲಿ ಹಾಡಾಗಿ ಹರಿದಿದೆ. ಆದರ್ಶ ಶಿಕ್ಷಕರಾಗಿ ಕವಿಯಾಗಿ ಕತೆಗಾರರಾಗಿ ವಿಮರ್ಶಕರಾಗಿ ಪ್ರಬಂಧಕರಾಗಿ ಅನುವಾದಕರಾಗಿ ಸಾಹಿತ್ಯ ಕ್ಷೇತ್ರದ ನಾನಾ ನೆಲೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಕಳೆದ ಮೂರು ದಶಕಗಳಿಂಗಿತಲೂ ಹೆಚ್ಚು ಕಾಲ ದೂರದ ಮುಂಬೈಯಲ್ಲಿದ್ದುಕೊಂಡು ಕನ್ನಡ ಸಾಹಿತ್ಯದ ಕೃಷಿಯನ್ನು ಸಮರ್ಥವಾಗಿ ಮುನ್ನಡೆಸಿಕೊಂಡು ಬಂದ ಅವರದು ಬಹುಭಾಷಿಕ ಸಂವೇದನೆ. ಮನೆ ಮಾತು ಉರ್ದು, ಕಲಿತದ್ದು ಕನ್ನಡ ಮಾಧ್ಯಮದಲ್ಲಿ ಮುಂದೆ ಇಂಗ್ಲೀಷ್‌ಗೆ ದಾಟು. ಮರಾಠಿ, ಹಿಂದಿ, ಗುಜರಾತಿ ಪರಿಸರದಲ್ಲಿ ಸೇವೆ ಸಲ್ಲಿಸುವ ಅವಕಾಶ. ಮುಂದೆ ಸಂಸ್ಕೃತದಲ್ಲಿ ವಿಶೇಷ ಅಧ್ಯಯನ. ಹೀಗೆ ನಮ್ಮಲ್ಲಿರಬೇಕಾದ ಸಾರಸ್ವತ ಮೈತ್ರಿಗೆ ಉತ್ತಮ ನಿದರ್ಶನ. ಬಾಬಾ ಸಾಹೇಬ ಸನದಿ ಅವರು ಕರ್ನಾಟಕತ್ವವನ್ನು ಮೈಗೂಡಿಸಿಕೊಂಡು ಒಂದು ಮೂರ್ತಿಯಾದವರು. ಅವರು ಕರ್ನಾಟಕದವರಷ್ಟೋ.... ಅಷ್ಟೇ ಭಾರತದವರೂ ಆಗಿದ್ದಾರೆ. ಒಬ್ಬ ಒಳ್ಳೆಯ ಮುಸ್ಲಿಂ, ಒಬ್ಬ ಒಳ್ಳೆಯ ಕನ್ನಡಿಗ,

ಒಬ್ಬ ಒಳ್ಳೆಯ ಭಾರತೀಯ ಹೇಗೆ ಇರುತ್ತಾನೆಂದು ಕೇಳಿದರೆ ಈ ಸನದಿ ಅವರ ಕಡೆಗೆ ಬೆರಳೆತ್ತಿ ತೋರಿಸಬಹುದು ಎಂದು ಪಾಟೀಲ ಪುಟ್ಟಪ್ಪ ಅವರು ಸನದಿ ಅವರ ವ್ಯಕ್ತಿತ್ವವನ್ನು ಸರಿಯಾಗಿಯೇ ಗುರುತಿಸಿದ್ದಾರೆ.

ಹೊಸಗನ್ನಡ ಸಾಹಿತ್ಯದ ಎಲ್ಲ ಚಳವಳಿಗಳನ್ನು ಆಯಾಮಗಳನ್ನು ತಮ್ಮ ಕಣ್ಣುಮುಂದೆ ಕಂಡ ಸನದಿ ಅವರು ಆಯಾಮ ಕಾಲ ಘಟ್ಟಗಳಲ್ಲಿ ತಮ್ಮ ಅಭಿವ್ಯಕ್ತಿಯನ್ನು ಸಜೀವವಾಗಿರಿಸಿಕೊಂಡು ಕಾವ್ಯ ಸಂವೇದನೆಯನ್ನು ಹೊರಹೊಮ್ಮಿಸುತ್ತಾ ಬಂದಿದ್ದಾರೆ. ಸಾಹಿತ್ಯ ಕ್ಷೇತ್ರದ ಕಾಲಕಾಲದ ಗೊಂದಲಗಳನ್ನು ತಲೆಗೆ ಹಚ್ಚಿಕೊಳ್ಳದೆ ತಮ್ಮ ಕಾವ್ಯನಾಮೆಯನ್ನು ಮುನ್ನಡೆಸಿದವರು. ಹೌಹಾರಿ ಅತ್ತಿತ್ತ ಓಡಾಡುವರ ನಡುವೆ / ಸ್ತಂಭದೊಲು ನಿಂತು / ನಿಂತಲ್ಲೇ / ದೀಪಸ್ತಂಭವಾಗು/ ಇದು ಕವಿ ಹೊಸಬರಿಗೆ ಹೇಳಿದ ಕಿವಿಮಾತು. ಈವರೆಗೆ ಸನದಿ ಅವರು ಹದಿನೇಳು ಕವನ ಸಂಕಲನಗಳನ್ನು ಹೊರತಂದಿದ್ದಾರೆ. ಸೂರ್ಯಪಾನ ಅವರ ಸಮಗ್ರ ಕಾವ್ಯ, ತಪನಿಂದ ತಾವರೆ ಅವರ ಆಯ್ದ ಕವಿತೆಗಳ ಸಂಕಲನ. ಸೋಪಾನ ಸನದಿ ಅವರ ಸಾಹಿತ್ಯ ಸಮೀಕ್ಷೆಯನ್ನು ಒಳಗೊಂಡ ಗ್ರಂಥ. ಮೂರು ವಿಮರ್ಶಾ ಸಂಕಲನ ಹಾಗೂ ನಾಲ್ಕು ಅನುವಾದ ಕೃತಿಗಳೂ ಬೆಳಕು ಕಂಡಿವೆ.

ಬದುಕು ಚಲನಶೀಲವಾಗಿರಬೇಕು ಎಂಬ ಧೋರಣೆ ಅವರ ಸಾಹಿತ್ಯದಲ್ಲಿ ಕಾವ್ಯದಲ್ಲಿ ಎದ್ದು ಕಾಣುವ ಅಂಶ. ಸೂರ್ಯನ ಕಾವಿನಲಿ ಕುಳಿತಲ್ಲಿಯೇ ಕುಳಿತು ಬೇಳೆ ಬೇಯಿಸಿಕೊಂಡರೆ ಸಾಕೆ ? ಎನ್ನುವ ಕವಿ ನಮ್ಮ ಕಾಲಿನ ಕೆಳಗೆ ನಮ್ಮ ಗಮನವೇ ಇಲ್ಲ ಎಂಬುದನ್ನು ಒತ್ತಿಹೇಳಿ ನಮ್ಮನ್ನು ಎಚ್ಚರಿಸಿದ್ದಾರೆ. ಸಾಮಾಜಿಕ ಕಾಳಜಿಯನ್ನು ಕಣ್ಣಲ್ಲಿ ತುಂಬಿಕೊಂಡ ಮಾನವೀಯ ಕವಿ ಅವರು. ನನ್ನ ಪದ ಸಂ/ಪದದ ಸಂಭ್ರಮಕೆ ನಾ ಕಾಣೆ / ಜಾತಿ ಮತಗಳ ತಳಿರು ತೋರಣದ ಗರಜು/ ಎಂಬ ಧೃಡ ನಿಲುವು ಅವರದು. ಜಾತಿ ಮತ ಪಂಥವನ್ನು ಮೀರಿದ ಈ ಕವಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಸೇವೆ ಸಲ್ಲಿಸಿದವರು. ಹೀಗಾಗಿ ಅವರ ಕಾವ್ಯವೂ ಜನಪರವಾದುದು.

ನಾವೇನೋ ಸಾ/ಮಾನ್ಯ ಪ್ರಜೆ / ಅಸಾಮಾನ್ಯರ ಸಾಲಿನಲಿ ನಿಲ್ಲುವಂಥವನಲ್ಲ / ಇದು ಸನದಿ ಅವರ ಸೌಜನ್ಯದ ಮಾತು. ಅವರು ಸ್ನೇಹ ನಿಧಿ. ಸಾಂಸ್ಕೃತಿಕ ರಾಯಭಾರಿಯಾಗಿ ನಾಡಿನ ಉದ್ದಕ್ಕೂ ಓಡಾಡಿದವರು. ಮುಂಬಯಿಯಾದಿ ನಾಡಿನ ಉದ್ದಕ್ಕೂ ಓಡಾಡಿದವರು. ಮುಂಬಯಿಯ ಕನ್ನಡ ಚಟುವಟಿಕೆಗಳ ಕೇಂದ್ರ ಬಿಂದುವಾಗಿ, ಪ್ರೇರಕ ಶಕ್ತಿಯಾಗಿ ಮಾಡಿದ ಕೆಲಸ ಗಾತ್ರದಲ್ಲಿಯೂ ಗುಣದಲ್ಲಿಯೂ ಮಹತ್ವದ್ದಾಗಿದೆ. ಅವರ ಸಾಹಿತ್ಯದಲ್ಲಿ ಸತ್ವವಿದೆ.... ಕನ್ನಡ ವಿಮರ್ಶೆ ಅವರ ಸಾಹಿತ್ಯ ಸಾಧನೆಯನ್ನು ಗುರುತಿಸುವಲ್ಲಿ ಸೋತಿದೆ.

ಬದುಕು ಮತ್ತು ಬರವಣಿಗೆಯ ಬಗೆಗೆ ಗಂಭೀರ ನಿಲುವನ್ನು ಹೊಂದಿರುವ ಕವಿ ಸನದಿ ಅವರು ತಮ್ಮ ಕಾವ್ಯದ ತೂಕವನ್ನು ಎಂದೂ ಕಡಿಮೆ ಮಾಡಿಗೊಟ್ಟವರಲ್ಲ. ಯಾವುದೇ ದಾಕ್ಷಿಣ್ಯವನ್ನು ದಾಟುವ ಪ್ರಜ್ಞಾವಂತಿಕೆ ಅವರ ಕಾವ್ಯದಲ್ಲಿ ದಾಖಲುಗೊಂಡಿದೆ.

ರಾಷ್ಟ್ರ ಪ್ರೇಮದಲಿ / ಹಿಂದೂ ಮುಸ್ಲಿಂ/ಗೆರೆಗಳ ಕೊರೆಯುವ ನಾಯಕರೆ / ಯಾವ ದೇಶದಲ್ಲಿ ಮೈದಾಳಿದ್ದು / ನಿಮ್ಮ ಜೀವ ಕೋಶ / ಹುಟ್ಟಿದ ಮನೆಯಲಿ ಕಟ್ಟುವ ದೇತಕೆ/ ಅಡಿಗಡಿಗೂ ಗೋಡೆ / ಒಂದೇ ಮನೆಯಲಿ ಒಮ್ಮನವಿರಲಿ / ಎನ್ನಲಿಕಾವ ಬಿಡೆ / ಎಂದು ಮುಲಾಜಿಲ್ಲದೆ ಪ್ರಶ್ನಿಸಿದ್ದಾರೆ. ಯಾವ ಮೂಲೆಯಲ್ಲೂ / ನೀರಿನ ಸೆಲೆ ದೊರೆಯದೆಂದೇ / ಭಾವಿಸುವ ಮನಸೊಂದು ಮರುಭೂಮಿ / ಎನ್ನುತ್ತಾರೆ ಕವಿ. ಮರುಭೂಮಿಯಲ್ಲೂ ಒಂಟೆ ಒಯಸಿಸ್‌ಗಳನ್ನು ಹುಡುಕುತ್ತದೆ. ಮನುಷ್ಯ ಈ ಬಾಳ ಪಯಣದಲ್ಲಿ ಒಂಟಿಯಾಗದೇ ಒಂಟೆಯಂತಾಗಬೇಕು. ಜೀವ ಸಲೆಗಳ ಶೋಧ ನಡೆಯಬೇಕೆನ್ನುತ್ತಾರೆ ಕವಿ.

ಮತಮತಗಳ ತಿರುಳಿನಲ್ಲಿ ಸಹ ಮತ ಕಾಣಿಸಿಕೊಳ್ಳಬೇಕು ಎನ್ನುವ ಕವಿ ಹೊಸ ಬದುಕಿಗೆ ಜೀಕುವ ಅಗತ್ಯವನ್ನು ಒತ್ತಿ ಹೇಳಿದ್ದಾರೆ. ನಮ್ಮ ದೇಶದ ಹಿನ್ನಡೆಗೆ ಕವಿ ಕೊಡುವ ಕಾರಣವಂತೂ ಮಾರ್ಮಿಕವಾಗಿದೆ. ಸಾಧು ಸಂತರು ಮತ್ತು ದಾರ್ಶನಿಕರು / ಸೇರಿ ಹಾಡಿದ್ದೇ ಹಾಡಿದ್ದು ಭಕ್ತಿ ಗೀತೆ / ಇದ್ದ ಎರಡೂ ಕೈ ನಮನದೊಳೆ ತೊಡಗಿದವು/ ಕೆಲಸಕ್ಕೆ ಮತ್ತೊಂದು ಕೈ ಮೂಡಿಬರಲಿಲ್ಲ / ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಇಂದು ವಿಶ್ವವೇ ಒಂದು ಹೆಬ್ಬಾವಿನ ನೆರಳಲ್ಲಿ ನಿಂತ ಕಪ್ಪೆಯಂತಾಗಿದೆ. ಎತ್ತ ನೋಡಿದರೂ ಭಯ, ಭಯ ! ಕೆಲೆವೆಡೆ ವ್ಯಕ್ತ ಕೆಲೆವೆಡೆ ಅವ್ಯಕ್ತ. ಇಂದು ಭಯೋತ್ಪಾದನೆಯನ್ನು ಮೀರಿಸುವ ಮತ್ತೊಂದು ಉತ್ಪಾದನೆಯೇ ನಮಗೆ ಗೋಚರಿಸದಂತಾಗಿದೆ. ಜನ ಜೀವನದ ಪಾಡು ಹಾಗಿರಲಿ. ದೇಶಾಡಳಿತ ನಡೆಸುವ ನಗರಸಭೆ ಶಾಸನ ಸಭೆ, ಸಂಸತ್ತು ಮಾತ್ರವಲ್ಲದೆ ಇಂದು ದೇವರ ಮಂದಿರ, ಮಸ್ಜಿದ್‌ಗಳಿಗೆ ಚರ್ಚು ಗುರುದ್ವಾರಗಳಿಗೂ ಪೊಲೀಸ್ ಪಹರೆಯಿಡುವಂಥ ಅನಿವಾರ್ಯತೆಯೊದಗಿದ್ದು ಭಯಂಕರ ವಿಪರ್ಯಾಸ ಅಲ್ಲವೆ ! ಸರ್ವ ರಕ್ಷಕನಾದ ದೇವರಿಗೆ ರಕ್ಷಣೆ ನೀಡಬೇಕಾದ ಜರೂರೀ ಸ್ಥಿತಿ ಬಂದುದು ಯಾವುದಾದರೂ ಸಮಾಜ ಅಭಿಯಾನ ಪಡುವಂಥ ಸಂಗತಿಯೇ ? ಎಂದವರು ಪ್ರಶ್ನಿಸುತ್ತಾರೆ.

'ಯಾತಕ್ಕಯ್ಯಾ ನಮ್ಮ ಅಂಗಳದಿ ವಾದ ? ಕಟ್ಟಲಾಗದ ನಮ ಕೈಗಳಿಗೆ ಏತಕ್ಕೋ ಕೆಡದೆ ನೋಡುವ ಹುಲು ವಿನೋದ ಎಂದು ಒಲವಿನ ತಾಣ, ಒಂದು ಮನೆಯ ಅಂಗಣ ಎಂಬ ವಿಸಾಲ ದೃಷ್ಟಿಕೋನ ಸನದಿ ಅವರದು.

ಸನದಿ ಅವರ ಸಾಹಿತ್ಯ ಸಾಧನೆಯನ್ನು ಗುರುತಿಸಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕಾವ್ಯಾನಂದ ಪುರಸ್ಕಾರ, ಭಾರತ ಸರಕಾರದ ಪ್ರಶಸ್ತಿ, ಭೂಸನೂರು ಮಠ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಶ್ರೇಷ್ಠ ಹೊರನಾಡ ಕನ್ನಡಿಗ ಪ್ರಶಸ್ತಿ, ಗುರು ನಾರಾಯಣ ಪ್ರಶಸ್ತಿ ಹೀಗೆ ಈ ಪಟ್ಟಿಯನ್ನು ಮುಂದುವರಿಸಬ್ಹಾರದು. ಇತ್ತೀಚೆಗೆ ಬೆಳಗಾವಿಯಲ್ಲಿ ಬಿ.ಎ. ಸನದಿ ಸಾಂಸ್ಕೃತಿ ಪ್ರತಿಷ್ಠಾನ ರಚನೆಗೊಂಡಿದ್ದು ಭವಿಷ್ಯದಲ್ಲಿ ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ಯೋಜನೆ ಕೈಗೊಂಡಿರುವುದು ಸಂತಸದ ಸಂಗತಿ.

ಕಳೆದ ಐದೂವರೆ ದಶಕಗಳಿಂದ ಸಾಹಿತ್ಯ ಸೃಷ್ಟಿಯ ಅಸಲಿ ಕಸುಬಿನಲ್ಲಿ ನಿರತರಾಗಿರುವ ಬಿ.ಎ. ಸನದಿ ಅವರಿಗೆ ಈಗ ಎಪ್ಪತ್ತರ ಹರೆಯ. 'ನಗರವೆಂಬ ನಾಡ/ ನಾಗರಿಕ ಕಟ್ಟು ಪಾಡೇ' ಎಂದು ಅಣಕಿಸಿದ ಈ ಕವಿ ಹಸಿರು ಮೈ ಮನಸ್ಸುಗಳ ಗ್ರಾಮಾವಳಿಯ ಕರೆಗೆ ಮನಸೋತು ಮುಂಬಯಿಯಿಂದ ಕುಮಟಾಕ್ಕೆ ತಮ್ಮ ನಿವಾಸವನ್ನು ಬದಲಿಸಿದ್ದಾರೆ. ಕೊಂಕಣದ ಕಡಲ ತೀರದಲ್ಲಿ ಸನದಿ ಅವರ ಸಾಹಿತ್ಯ ಕೃಷಿ ಇನ್ನಷ್ಟು ನಡೆಯಲಿ.

(ಪ್ರಜಾವಾಣಿ ಸೌಭಾರ)

ಜಯಂತಿ ಮನೋಹರ್ : ಹೀಗೊಬ್ಬ ಬಹುಭಾಷಾ ವಿಶಾರದೆ

- ಮುರಲಿಕೃಷ್ಣ ಬೆಳಾಲು

ಯಾವುದೇ ಭಾಷೆಯನ್ನು ಕಲಿಸುವಾಗ ಭಾಷಾಂತರ ವಿಧಾನವನ್ನು ಬಳಸುತ್ತಾರೆ. ಆದರೆ ಜಯಂತಿ ಮನೋಹರ್ ಭಾಷೆ ಕಲಿಸುವ ರೀತಿಯೇ ಬೇರೆ. ಅವರು ಎರಿಲ್.ಡಬ್ಲು.ಸ್ಟೆವಿಕ್ (Earl-w-stevick)ರ ಡೈರೆಕ್ಟ್ ಮೆಥಡ್ (ನೇರ ವಿಧಾನ0 ಬಳಸಿ ಕನ್ನಡ, ಸಂಸ್ಕೃತ ಭಾಷೆಗಳನ್ನು ವಿದೇಶಿಯರಿಗೂ ಹೇಳಿಕೊಡುತ್ತಾರೆ. ಆ ವಿಧಾನವೇ ಸಮರ್ಪಕ, ಅದರ ಮೂಲಕ ಯಾವುದೇ ಭಾಷೆಯನ್ನು ಸುಲಭವಾಗಿ ಕಲಿಯಲು ಸಾಧ್ಯ ಎಂಬುದು ಅವರ ಸ್ಪಷ್ಟ ಅಭಿಪ್ರಾಯ.

ನಾವು ಪ್ರಾರಂಭದಲ್ಲಿ ಶಾಲೆಗಳಲ್ಲಿ ಭಾಷೆ ಕಲಿಯದೆ ಓದಲು, ಬರೆಯಲು ಕಲಿಯುತ್ತೇವೆ. ಕನ್ನಡ ನಮ್ಮ ಮಾತೃಭಾಷೆಯಾಗಿರುವುದರಿಂದ ಅದರ ವ್ಯಾಕರಣ ನಮ್ಮೊಳಗಿರುತ್ತದೆ. ಮನೆಯಲ್ಲಿ ಮಕ್ಕಳು ಮೊದಲು ಮಾತನಾಡಲು ಕಲಿಯುತ್ತಾರೆ. ಹಾಗೆ ವಿದೇಶಿಯರಿಗೂ ಇಲ್ಲಿನ ಭಾಷೆ ಕಲಿಸುವಾಗ ಮಾತನಾಡಲು ಮೊದಲು ಕಲಿಸಬೇಕು ಎನ್ನುವ ಜಯಂತಿ ಭಾಷೆ ಕಲಿಯಬಯಸುವವರಿಗೆ ಮೊದಲ 15 ದಿನಗಳವರೆಗೂ ಮಾತನಾಡಲು ಮಾತ್ರ ಕಲಿಸುತ್ತಾರೆ. ಆನಂತರವೇ ಗ್ರಾಂಥಿಕ ಭಾಷೆಗೆ ಪ್ರವೇಶ ಮತ್ತು ಲಿಪಿಯನ್ನು 'ಟಚ್' ಮಾಡುವುದು. ಅವರವರಿಗೆ ಬೇಕಾದ ಪಾಠಗಳನ್ನು ಪ್ರತಿದಿನ ಪ್ರತ್ಯೇಕವಾಗಿ ಅವರ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ತಯಾರಿಸಿ ಅದನ್ನು ಕಲಿಸುತ್ತಾರೆ. ಕನ್ನಡ, ಸಂಸ್ಕೃತ ಭಾಷೆಗಳನ್ನು ದಿನಕ್ಕೆ ಒಂದೂವರೆ ಗಂಟೆ ತರಗತಿಯಂತೆ, 40 ದಿನಗಳಲ್ಲಿ ಡೈರೆಕ್ಟ್ ಮೆಥೆಡ್‌ನಲ್ಲಿ ಕಲಿಸುವಲ್ಲಿ ಯಶಸ್ವಿಯಾಗಿದ್ದಾಗಿ ಅವರು ಹೇಳುತ್ತಾರೆ.

ಜಯಂತಿ, 1970ರ ಸಮಯದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ವಿದೇಶದಿಂದ ಕನ್ನಡ ಭಾಷೆ ಕಲಿಯಲು ಬರುವವರಿಗೆ ಹೇಳಿಕೊಡಲಾರಂಭಿಸಿದ್ದರು. ಎಸ್‌ಬಿಐ ಬ್ಯಾಂಕಿನಲ್ಲಿ ಉದ್ಯೋಗಿಯಾಗಿ, ಅಲ್ಲೂ ಭಾಷಾ ವಿಭಾಗದಲ್ಲಿ 10 ವರ್ಷ ಕೆಲಸ ಮಾಡಿದರು. ಕಡೆಗೆ ಬ್ಯಾಂಕ್ ಕೆಲಸ ಬಿಟ್ಟು ಸಂಪೂರ್ಣ ಭಾಷೆ ಕಲಿಸಲು ತೊಡಗಿಸಿಕೊಂಡಿದ್ದಾರೆ. ಸಂಸ್ಕೃತ ಆನರ್ಸ್, ಸಂಸ್ಕೃತ, ಕನ್ನಡಗಳಲ್ಲಿ ಎಂ.ಎ. ಮಾಡಿರುವ ಅವರಿಂದ ಭಾಷೆ ಕಲಿತುಕೊಳ್ಳಲು ಅಮೆರಿಕಾ, ಜರ್ಮನಿ, ಆಸ್ಟ್ರೇಲಿಯಾ, ಇಂಗ್ಲೆಂಡ್, ಸ್ವಿಟ್ಜರ್‌ಲ್ಯಾಂಡ್, ಅರ್ಜೆಂಟೈನಾ ಮೊದಲಾದ ದೇಶಗಳಿಂದಲೂ ಹುಡುಕಿಕೊಂಡು ಬರುತ್ತಾರೆ. ಇಲ್ಲಿನವರು ಅವರನ್ನು ಗುರುತಿಸಿದ್ದೇ ಕಡಿಮೆ.

ಇಲ್ಲಿಗೆ ಕನ್ನಡ, ಸಂಸ್ಕೃತ ಕಲಿಯುತ್ತೇವೆ ಎಂದು ಬರುವ ವಿದೇಶಿಯರೆಲ್ಲ ಯಾವುದಾದರೂ ವಿಷಯದಲ್ಲಿ ವಿದ್ವಾಂಸರೇ ಆಗಿರುತ್ತಾರೆ. ಜರ್ಮನಿಯವರಾದ ಡಾ.

ಹೈಡ್ರೂನ್ ಬ್ರುಕ್‌ನರ್ ಸಂಸ್ಕೃತದಲ್ಲಿ ಶಂಕರರ ಹಾವು ಮತ್ತು ಹಗ್ಗ ಸಿದ್ಧಾಂತದ ಮೇಲೆ ಡಾಕ್ಟರೇಟ್ ಪಡೆದವರು. ಅವರು ಜಯಂತಿಯವರಿಂದ ಕನ್ನಡ ಕಲಿತು ದಕ್ಷಿಣ ಕನ್ನಡದ ಭೂತಕೋಲದ ಬಗ್ಗೆ ಅಧ್ಯಯನ ನಡೆಸಿ ಪುಸ್ತಕವನ್ನೂ ಬರೆದಿದ್ದಾರೆ. ಹಾಗೇ ಅರ್ಜೆಂಟೈನಾದಿಂದ ಒಂದೂವರೆ ವರ್ಷ ಹಿಂದೆ ಬಂದು ಕನ್ನಡ ಕಲಿತ ಯೋಗಪಟು ಬ್ರೂಸ್ ಡುಫಿ (Bruce Duffy) ಸಂಸ್ಕೃತದಲ್ಲಿ ಶಂಕರ, ರಾಮಾನುಜ, ಮಧ್ವ ಸಿದ್ಧಾಂತಗಳನ್ನು ಚೆನ್ನಾಗಿ ತಿಳಿಸಿದ್ದರು.

ಜಯಂತಿಯವರು ಕರ್ನಾಟಕಕ್ಕೆ ಮೆಡಿಕಲ್ ಓದಲು ಬಂದ ಅಸ್ಸಾಂ., ಬಂಗಾಲಿ ಮೊದಲಾದ ರಾಜ್ಯಗಳ ವಿದ್ಯಾರ್ಥಿಗಳು ರೋಗಿಗಳೊಂದಿಗೆ ಕನ್ನಡದಲ್ಲಿ ಮಾತನಾಡಲು 14 ಕ್ಲಾಸುಗಳ್ಲಲೇ ಕಲಿಸಿದ್ದಾರೆ. 90 ರ ದಶಕದಲ್ಲಿ ಹೈದರಾಬಾದಿನಲ್ಲಿ ಐಪಿಎಸ್ ಅಧಿಕಾರಿಗಳಿಗೆ ಐಪಿಎಸ್ ಕನ್ನಡ, ಸಂಸ್ಕೃತ ವಿಭಾಗದ ವತಿಯಿಂದ ಕನ್ನಡ ಕಲಿಸಿದ್ದಾರೆ.

ಜರ್ಮನಿಯ ಪ್ರಸಿದ್ಧ ಹೈಡಲ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ 40 ದಿನಗಳ ಕ್ಷಿಪ್ರ ಕನ್ನಡ ಕಲಿಕಾ ಕಮ್ಮಟ ನಡೆಸಿಕೊಟ್ಟ ಕೀರ್ತಿಯೂ ಜಯಂತಿಯವರದು.

ಇಲ್ಲಿನ ಬೇರೆ ಬೇರೆ ರಾಜ್ಯದವರಿಗೆ ಕನ್ನಡ ಭಾಷೆ ಕಲಿಸುವುದು ಸುಲಭ. ಅವರಿಗೆ ಇಲ್ಲಿನ ಸಂಸ್ಕೃತಿ ಗೊತ್ತಿರುತ್ತದೆ. ಆದರೆ ವಿದೇಶಿಯರಿಗೆ ಉಚ್ಚಾರಣೆ ಕಲಿಸುವುದೇ ಕಷ್ಟ. ಆದರೂ ಪ್ರೀತಿಯಿಂದ ಕಲಿಯುತ್ತಾರೆ. ಆದರೆ ಇಲ್ಲಿನವರಿಗೆ ಅದು ಬೇಕಾಗಿಲ್ಲ ಎಂಬುದು ಅವರ ದುಃಖ.

'ಭಾಷೆ ಕಲಿವಾಗ ನಾಲಿಗೆ ಎಲ್ಲೆಲ್ಲಿ ಹೋಗುತ್ತದೆ ಎನ್ನುವುದರ ಮೇಲೆ ಉಚ್ಚಾರಣೆ ವ್ಯತ್ಯಾಸವಾಗುತ್ತದೆ. ನಾಲಿಗೆಗೆ 'ತಟ ದಡ ನಣ' ಈ ರೀತಿಯ ಅಕ್ಷರ ಹೇಳಿಸಿ ಡ್ರಿಲ್ಲಿಂಗ್ ಮಾಡಿಸುತ್ತೇನೆ. ಹ್ರಸ್ವ, ದೀರ್ಘದಂತಹ ಚಿಕ್ಕ ವಿಷಯಕ್ಕೂ ಪ್ರಾಮುಕ್ಯ ನೀಡುತ್ತೇನೆ. ಈ ವಿಧಾನದಲ್ಲಿ ಕಲಿತವರು ಚೆನ್ನಾಗಿ ಕಲಿಯುತ್ತಾರೆ' ಎಂಬುದರ ಅನುಭವದ ನುಡಿ.

ಕಳೆದ ಐದು ವರ್ಷಗಳಿಂದ ಜಯಂತಿಯವರು ಋಗ್ವೇದದ ಅಭ್ಯಾಸವನ್ನು 111 ವರ್ಷದ ಪ. ಸುಧಾಕರ ಚತುರ್ವೇದಿಗಳಲ್ಲಿ ಮಾಡುತ್ತಿದ್ದಾರೆ. ಈಗ 'ಋಗ್ವೇದದಲ್ಲಿ ಸಂಕೇತಾರ್ಥಗಳು' ಎಂಬ ವಿಷಯದಲ್ಲಿ ಡಾಕ್ಟರೇಟ್ ಬರೆಯಲು ತಯಾರಿ ನಡೆಸುತ್ತಿದ್ದಾರೆ. ಜರ್ಮನ್ ಸೇರಿದಂತೆ ಆರು ಭಾಷೆಗಳಲ್ಲಿ ಅವರು ಮಾತನಾಡಬಲ್ಲರು.

ಜಯಂತಿಯವರು 80 ರ ದಶಕದಲ್ಲಿ ಪತಿ ಬಿ.ಎಸ್. ಮನೋಹರ್ ಜತೆಗೂಡಿ ಅನೇಕ ಸಾಕ್ಷ್ಯ ಚಿತ್ರಗಳನ್ನೂ ತೆಗೆದಿದ್ದಾರೆ. ಇವರು ತೆಗೆದ ಗೋಕಾಕ್ ಚಳವಳಿ, ಕಳ್ಳ ಭಟ್ಟಿ ದುರಂತ, ವೀನಸ್ ಸರ್ಕಸ್‌ನಲ್ಲಿ 100 ಮಂದಿ ಮಕ್ಕಳು ಸಾವನ್ನಪ್ಪಿದ ದುರಂತ, ನವಲಗುಂದ ರೈತರ ದುರಂತ, ಶ್ರವಣಬೆಳಗೊಳದ ಬಾಹುಬಲಿಯ 1000 ವರ್ಷದ ಮಹಾಮಸ್ತಕಾಭಿಷೇಕ, ರಾಜೀವ್‌ಗಾಂಧಿಯವರ ರಾಜಕೀಯ ಪ್ರವೇಶ, ಬಂಗಾರಪ್ಪ, ದೇವರಾಜ ಅರಸು ಮತ್ತು ಹಲವು ರಾಜಕೀಯ ಪಕ್ಷಗಳಿಗೆ ಸಂಬಂಧಿಸಿದ ಅನೇಕ ಸಾಕ್ಷ್ಯ ಚಿತ್ರಗಳು ಬಹಳ ಜನಪ್ರಿಯತೆ ಪಡೆದಿವೆ.

ಹೀಗೆ ಜಯಂತಿಯವರ ಭಾಷಾ-ಸಂಸ್ಕೃತಿ ಕೈಂಕರ್ಯ ತಡೆಯಿಲ್ಲದೆ ನಡೆದಿದೆ.

(ವಿಜಯ ಕರ್ನಾಟಕ ಸಾಭಾರ)

ಭಾರತೀಯ ವಲಸೆಗಾರರು ಅಮೆರಿಕ ಜನಜೀವನದಲ್ಲಿ ಬೆರೆತು ಒಂದಾಗುವುದು ಸಾಧ್ಯವೆ ?

- ಪ್ರೊ. ವೈ.ಆರ್. ಮೋಹನ್

ಪ್ರಾಕೃತಿಯ ಮಡಿಲಲ್ಲಿ, ಎಲ್ಲವೂ ಒಂದು
ಆದರೆ ಒಂದೊಂದು ಜನಾಂಗಕ್ಕೂ ತಮ್ಮ
... ಬಂದ ಗುಣಮಟ್ಟ ವಿಭಿನ್ನ

ಪ್ರಸ್ತಾವನೆ

ಅಮೆರಿಕ ಜನಜೀವನದಲ್ಲಿ ಭಾರತೀಯ ವಲಸೆಗಾರರು ಬೆರೆತು ಒಂದಾಗಿ ಹೊಂದಿಕೊಳ್ಳುವುದು ಹೇಗೆ ಎಂಬ ಪ್ರಶ್ನೆಯನ್ನು ಸಮಾಜ ಶಾಸ್ತ್ರದ ದೃಷ್ಟಿಯಿಂದ ಉತ್ತರಿಸುವ ಪ್ರಯತ್ನ ಈ ಲೇಖನ. ಮುದಾಯದ ಹಿತಾಸಕ್ತಿಗಳಿಗೆ ಇಲ್ಲಿ ಒತ್ತು ಕೊಡಲಾಗಿದೆ. ಇದಕ್ಕೆ ಕಾರಣ ವ್ಯಕ್ತಿ ಗೌಣ ಎಂದಲ್ಲ, ಸಂಸ್ಕೃತಿ ಪರಂಪರೆಯ ಅಳಿವು-ಉಳಿವುಗಳು ಸಮುದಾಯದ ಆಕಾಂಕ್ಷೆ ಮತ್ತು ಅಗತ್ಯಗಳ ಮೇಲೆ ನಿಂತಿರುವುದರಿಂದ.

ಸುಮಾರು ಇನ್ನೂರು ವರ್ಷಗಳಿಂದಲೂ ಪ್ರಪಂಚದ ನಾನಾ ಭಾಗಗಳಿಂದ ಜನರು ಅಮೆರಿಕಾಕ್ಕೆ ವಲಸೆ ಬಂದಿದ್ದಾರೆ. ವಲಸೆಯ ಮೊದಲನೆಯ ಅಲೆಯ ಮುಂಚೂಣಿಯಲ್ಲಿದ್ದವರು ಯೂರೋಪಿನ ಹಲವಾರು ರಾಷ್ಟ್ರಗಳಿಂದ ಬಂದವರು. ಈಚೆಗೆ ವಲಸೆ ಬಂದವರಲ್ಲಿ ಹೆಚ್ಚಿನವರು ಮೆಕ್ಸಿಕೊ ಮತ್ತು ಇತರ ದಕ್ಷಿಣ ಅಮೆರಿಕ ದೇಶಗಳ ಜನ. ಕೆರೀಬಿಯನ್ ದ್ವೀಪಸ್ತರು ಮತ್ತು ಏಷ್ಯಾ ಭೂಖಂಡದಿಂದ ಬಂದವರು. 1970ರಿಂದ ಈಚೆಗೆ ವಲಸೆಬಂದವರಲ್ಲಿ ಹೆಚ್ಚಿನವರು ವಿಯಟ್ನಾಮ್, ಲಾವೊಸ್ ಮತ್ತು ಕಾಂಬೋಜ ದೇಶಗಳಿಂದ ಹೊರ ಬಂದ ದೇಶ ಭ್ರಷ್ಟರು ಮತ್ತು ನಿರಾಶ್ರಿತರು. ಹೀಗೆ ಪ್ರಪಂಚದ ಎಲ್ಲಾ ಭಾಗಗಳಿಂದಲೂ ಜನರು ಆರ್ಥಿಕ ಸ್ಥಿತಿಯನ್ನು ಉತ್ತಮ ಗೊಳಿಸಿಕೊಳ್ಳುವುದಕ್ಕಾಗಿಯೋ, ಮತಧರ್ಮ ಸ್ವಾತಂತ್ರ್ಯ ಕಾಪಾಡಿಕೊಳ್ಳುವುದಕ್ಕಾಗಿಯೋ ಅಥವಾ ರಾಜಕೀಯ ದಬ್ಬಾಳಿಕೆಯನ್ನು ತಪ್ಪಿಸಿಕೊಳ್ಳಲೋ, ಅಮೆರಿಕಕ್ಕೆ ವಲಸೆ ಬಂದು ತಮ್ಮ ವಿಶಿಷ್ಟ ಭಾಷೆ, ಸಂಸ್ಕೃತಿ, ಉಡಿಗೆ-ತೊಡಿಗೆ, ತಿಂಡಿ-ತಿನಿಸುಗಳನ್ನು ಇಲ್ಲಿನ ಸಮಾಜದಲ್ಲಿ ಬೆರಸಿ ಅದನ್ನು ಒಂದು ವರ್ಣರಂಜಿತ ರತ್ನಕಂಬಳಿಯನ್ನು ಹೋಲುವಂತೆ ಮಾಡಿದ್ದಾರೆ.

ವಲಸೆಗಾರರ ಅಂಕೆಸಂಖ್ಯೆ

ಭಾರತೀಯ ವಲಸೆಗಾರರ ಬಗ್ಗೆ ಪೂರ್ಣ ಮಾಹಿತಿ ಒದಗಿಸುವುದು ಪ್ರಸ್ತುತ ಲೇಖನದ ಗುರಿಯಲ್ಲದಿದ್ದರೂ ಅವರ ಒಟ್ಟು ಸಂಖ್ಯೆ ಹಾಗೂ ಪ್ರಪಂಚದ ಇತರ ಭಾಗಗಳಿಂದ ಬಂದ ವಲಸೆಗಾರರ ಸಂಖ್ಯೆಯ ಸ್ಥೂಲ ಪರಿಚಯ ಸಮಯೋಚಿತ ಎನ್ನಿಸುತ್ತದೆ.

ಅಮೆರಿಕದಲ್ಲಿರುವ ಭಾರತೀಯ ವಲಸೆಗಾರರ ಅಂಕಿಅಂಶಗಳು

ಅಮೆರಿಕ ದೇಶದ Immigraiton and Naturalization Service ವರದಿಯ ಪ್ರಕಾರ ಭಾರತೀಯ ವಲಸೆಗಾರರ ಬಗ್ಗೆ ನಮಗೆ ದೊರಕುವ ವಿವರಗಳನ್ನು ಈ ಕೆಳಗೆ ಟಿಪ್ಪಣಿ ಮಾಡಲಾಗಿದೆ.

ಭಾರತೀಯ ವಲಸೆಗಾರರು
(By Last Permanent Residence)

ವಲಸೆಗಾರರ ಸಂಖ್ಯೆಯನ್ನು ಸಾವಿರಗಳಲ್ಲಿ ಸೂಚಿಸಲಾಗಿದೆ

1920-1929	1951-60	1961-70	1971-79
ಮೊತ್ತ	ಮೊತ್ತ	ಮೊತ್ತ	ಮೊತ್ತ
182	2.0	27.2	141.4

ಭಾರತೀಯ ವಲಸೆಗಾರರು (ಹುಟ್ಟಿನಿಂದ)

ಸಾವಿರ ಸಂಖ್ಯೆಯಲ್ಲಿ

1951-61	1961-20	1971-80
ಮೊತ್ತ	ಮೊತ್ತ	ಮೊತ್ತ
3.1	31.2	176.8

ಪ್ರಪಂಚದ ಎಲ್ಲಾ ಭೂಖಂಡಗಳಿಂದ ಬಂದ ವಲಸೆಗಾರರ ವಿವರ
(By Country of Last Permanent Residence)

ಸಾವಿರ ಸಂಖ್ಯೆಯಲ್ಲಿ

	1820-1929	1951-60	1961-70	1971-79
	ಮೊತ್ತ	ಮೊತ್ತ	ಮೊತ್ತ	ಮೊತ್ತ
ಒಟ್ಟು ವಲಸೆಗಾರರು	49,125	2,515.5	3,321.7	3,962.5
ಯೂರೋಪ್	36,267	1,325.6	1,123.4	728.2
ಏಷ್ಯಾ	3,037	150.1	427.8	1,352.1
ಮಧ್ಯ ಮತ್ತು ದಕ್ಷಿಣ ಅಮೆರಿಕ	9,248	996.9	1,716.4	1,778.3

ಆಫ್ರಿಕ	143	14.1	29.6	66.7
ಆಸ್ಟ್ರೇಲಿಯ ಮತ್ತು ನ್ಯೂಜಿಲ್ಯಾಂಡ್	121	11.5	19.6	21.6
ಇತರೆ	309	17.2	5.7	15.7

ಬಹು ಸಂಖ್ಯಾತರ ಮತ್ತು ಅಲ್ಪ ಸಂಖ್ಯಾತರ ನಡುವಿನ ಸಮಸ್ಯೆಗಳು

ಯಾವುದೇ ದೇಶದಲ್ಲಿ ವಲಸೆಗಾರರ ಸಂಖ್ಯೆ ಹೆಚ್ಚಿದಂತೆಲ್ಲ ಕೆಲವು ಸಮಸ್ಯೆಗಳು ಹುಟ್ಟುತ್ತವೆ. ಬಹುಸಂಖ್ಯಾತರ ಮತ್ತು ಅಲ್ಪಸಂಖ್ಯಾತರ ನಡುವಣ ಪ್ರತ್ಯಕ್ಷ ಅಥವಾ ಪರೋಕ್ಷ ಘರ್ಷಣೆ ಎಲ್ಲಾ ಸಮಸ್ಯೆಗಳಮೂಲವಾಗುತ್ತದೆ. ಅಲ್ಪಸಂಖ್ಯಾತರ ದೈಹಿಕ ಅಥವಾ ಸಾಂಸ್ಕೃತಿಕ ಗುಣಗಳನ್ನು ಆಧಾರ ಮಾಡಿಕೊಂಡು ಬಹುಸಂಖ್ಯಾತರು ಅವರ ಬ್ಗೆ ವಿಭಿನ್ನ ಹಾಗೂ ಅಸಮಾನ ರೀತಿಯಲ್ಲಿ ನಡೆದುಕೊಳ್ಳುವ ಸಂಭವವಿದೆ ಎಂದರೆ, ಅಲ್ಪಸಂಖ್ಯಾತರು ನಮ್ಮವರ್ಲ್ಲಲ, ನಮ್ಮ ಸಮಾನರಲ್ಲ. ನಮಗಿಂತ ಕೆಳಗಿನವರು ಎಂಬುವ ಮನೋಭಾವದಿಂದ ಕೂಡಿದ ನಡೆವಳಿಕೆಯನ್ನು ಬೆಳೆಸಿಕೊಳ್ಳುವ ಸಾಧ್ಯತೆ ಇದೆ. ಇದು ಸಮಾಜದ ನಾನಾ ಕ್ಷೇತ್ರಗಳಲ್ಲಿ ಭೇದಭಾವಕ್ಕೆ ಎಡೆಮಾಡಿಕೊಡಬಹುದು.

ಈ ಭೇದಭಾವಪೂರಿತ ನಡೆವಳಿಕೆಗಳು ಪ್ರತ್ಯಕ್ಷವಾಗಿರಬಹುದು ಅಥವಾ ಪರೋಕ್ಷವಾಗಿರಬಹುದು. ಭೇದಭಾವದ ಅನೇಕ ಸೂಕ್ಷ್ಮ ರೂಪಗಳನ್ನು ಅಲ್ಪಸಂಖ್ಯಾತರು ಎದುರಿಸಬೇಕಾಗುತ್ತದೆ. ಅಲ್ಪಸಂಖ್ಯಾತರನ್ನು ಗುರುತಿಸುವ ಮುಖ್ಯ ಸಾಮಾಜಿಕ ಚಿಹ್ನೆಗಳೆಂದರೆ : 1) ಹಕ್ಕುಬಾಧ್ಯತೆಗಳ ಕೊರತೆ ಅಥವಾ ರಾಜಕೀಯ ಬಲವಿಲ್ಲದಿರುವಿಕೆ; 2) ತಮ್ಮ ದೈಹಿಕ ಮತ್ತು ಸಾಂಸ್ಕೃತಿ ಅಂಶಗಳಿಂದಾಗಿ ಸಮಾಜದಲ್ಲಿ ಎಲ್ಲರ ಕಣ್ಣಿಗೆ ಎದ್ದು ಕಾಣುವುದು; 3) ಗಣನೀಯ ಸಂಖ್ಯೆ.

ಸಾಮೂಹಿಕ ಬಲ ಬರುವುದು ಮುಖ್ಯವಾಗಿ ಅಧಿಕ ಸಂಖ್ಯೆಯಿಂದ. ತೀರ ಅಲ್ಪಸಂಖ್ಯೆಯಲ್ಲಿರುವವರನ್ನು ಸಮಾಜ ಅಷ್ಟಾಗಿ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಈ ಕಾರಣದಿಂದಾಗಿಯೆ ಭಾರತೀಯ ವಲಸೆಗಾರರನ್ನು ಅಲ್ಪಸಂಖ್ಯಾತರೆಂದು ಅಧಿಕೃತವಾಗಿ ಪರಿಗಣಿಸಲು ರಾಜಕೀಯ ಒತ್ತಡ ತರಬೇಕಾಯಿತು. ಬಹುಸಂಖ್ಯಾತರು ತಮ್ಮ ಪ್ರಾಬಲ್ಯವನ್ನು ಉಳಿಸಿ ಬೆಳಸಲು ಶಾಲೆಗಳಲ್ಲಿ, ನೆರೆಹೊರೆಯ ವಸತಿಗಳಲ್ಲಿ ಮತ್ತು ಇಗರ್ಜಿಗಳಲ್ಲಿ ಪ್ರತ್ಯೇಕತೆ ಸಮಾಜರಚನೆಯ ಅಂಗವಾಗುವಂತೆ ಅಳವಡಿಸಲು ಪ್ರಯತ್ನ ಮಾಡುತ್ತಾರೆ.

ಆದರೆ ಸಂಘಟನೆಯ ಮೂಲಕ ಅಲ್ಪಸಂಖ್ಯಾತರು ಪ್ರಾಬಲ್ಯ ಗಳಿಸಬಹುದು. ಉದಾಹರಣೆಗೆ ಐರಿಷ್ ಮತ್ತು ಇಟಾಲಿಯನ್ ಬುಡಕಟ್ಟಿನ ಜನರು ನ್ಯೂಯಾರ್ಕಿನಲ್ಲಿ ತಮ್ಮ ಪ್ರತ್ಯೇಕ ಪರಂಪರೆಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಹೀಗೆಯೇ

ಸಾನ್‌ಫ್ರಾನ್ಸಿಸ್ಕೊ ನಗರದಲ್ಲಿ ಜೀನಿಯರು ಮತ್ತು ಜಪಾನೀಯರು ತಮ್ಮ ತಮ್ಮ ಸಂಸ್ಕೃತಿಯನ್ನು ಅವಲಂಬಿಸಿಕೊಂಡಿದ್ದಾರೆ. ಇದೇ ರೀತಿಯಲ್ಲಿ ಗ್ರೀಕರು ಮತ್ತು ಪೋಲೆಂಡ್ ಜನಾಂಗದವರು ಚಿಕಾಗೋದಲ್ಲಿ ತಮ್ಮ ಪ್ರತ್ಯೇಕತೆಯನ್ನು ಕಾಪಾಡಿಕೊಂಡಿದ್ದಾರೆ. ಮಯಾಮಿಯ ಕ್ಯೂಬನ್ನರು ಮತ್ತು ಲಾಸ್‌ಏಂಜಲೀಸ್‌ನ ವಿಯಟ್ನಾಮೀಯರು ತಾವು ಬಿಟ್ಟು ಬಂದ ದೇಶಗಲ ವಾತಾವರಣವನ್ನೇ ತಾವು ನೆಲಸಿರುವಲ್ಲಿ ನಿರ್ಮಿಸಿಕೊಂಡಿದ್ದಾರೆ. ಭಾರತೀಯ ವಲಸೆಗಾರರಲ್ಲಿ ಈ ಪ್ರಮಾಣದ ಪ್ರತ್ಯೇಕತೆ ರೂಪುಗೊಂಡಿರದಿದ್ದರೂ ಅವರು ಪ್ರತ್ಯೇಕ ಪರಂಪರೆಯುಳ್ಳ ಸಮುದಾಯವಾಗಿ ಬೆಳೆಯುವ ಚಿಹ್ನೆಗಳು ತೋರಿಬರುತ್ತಿವೆ. ನ್ಯೂಯಾರ್ಕಿನ ಕ್ವೀನ್ಸ್ ಮತ್ತು ಚಿಕಾಗೋ ಉತ್ತರ ಭಾಗದ ಡೇವನ್ ರಸ್ತೆಯಲ್ಲಿ ಸಂಚರಿಸಿದವರಿಗೆ ಇದು ಅನುಭವವಾಗುವುದರಲ್ಲಿ ಸಂದೇಹವಿಲ್ಲ.

ಅಲ್ಪಸಂಖ್ಯಾತರು ತಮ್ಮತನವನ್ನು ಕಳೆದುಕೊಂಡು ಬಹುಸಂಖ್ಯಾತ ಸಮುದಾಯದಲ್ಲಿ ವಿಲೀನಗೊಳ್ಳುವ ಸಾಧ್ಯತೆಗಳೂ ಇರಬಹುದು. ಆದರೆ ಇದು ಬಹುಸಂಖ್ಯಾತರು ಎಷ್ಟರವರೆಗೆ ತಮ್ಮ ಸಮುದಾಯದೊಳಗೆ ಅವರನ್ನು ಬಿಟ್ಟುಕೊಳ್ಳಲು ತಯಾರಿದ್ದಾರೆ ಎನ್ನುವುದನ್ನು ಅವಲಂಬಿಸಿದೆ. ಅಲ್ಪಸಂಖ್ಯಾತ ಸಮುದಾಯದ ವ್ಯಕ್ತಿಗಳು ಬಹುಸಂಖ್ಯಾತರ ನಡವಳಿಕೆ, ಮನೋಭಾವ, ಮೌಲ್ಯಗಳು ಮತ್ತು ಉಡುಗೆ ತೊಡುಗೆಗಳನ್ನು ಮೈಗೂಡಿಸಿಕೊಂಡಂತೆಲ್ಲಾ ಅವರು ತಮ್ಮ ಸಮುದಾಯ ಸಂಪ್ರದಾಯಗಳಿಂದ ದೂರ ಸರಿಯುವ ಸಾಧ್ಯತೆ ಇದೆ.

ಆದರೆ ಸಂಪೂರ್ಣ ವಿಲೀನೀಕರಣ ಸಾಧ್ಯವೆ ಎನ್ನುವ ಪ್ರಶ್ನೆ ಏಳುತ್ತದೆ. ಸಾಮಾಜಿಕ ವಿಲೀನೀಕರಣ ಬಹು ನಿಧಾನದ ಪ್ರಕ್ರಿಯೆ. ಅದು ಸಮುದಾಯಗಳ ನಡುವಣ ಬಹುಮುಖದ ಸಂಬಂಧಗಳನ್ನು ಒಳಗೊಂಡಿರುತ್ತದೆ. ಸಂಪೂರ್ಣ ಸಾದೃಶ್ಯತೆ ಸಾಧಿಸಲು ನಾಲ್ಕು ಮುಖ್ಯ ಅಂಶಗಳು ಬೇಕಾಗುತ್ತವೆ. ಮೊದಲನೆಯದಾಗಿ ಸಂಸ್ಕೃತಿ ಸಾದೃಶ್ಯತೆ : ಅಲ್ಪಸಂಖ್ಯಾತ ಸಮುದಾಯಗಳು ತಮ್ಮ ಸಂಪ್ರದಾಯಗಳನ್ನು ಕ್ರಮೇಣ ಬಿಟ್ಟುಕೊಟ್ಟು ಬಹುಸಂಖ್ಯಾತರ ಸಂಪ್ರದಾಯಗಳನ್ನು ಮೈಗೂಡಿಸಿಕೊಳ್ಳಬೇಕಾಗುತ್ತದೆ. ಎರಡನೆಯದಾಗಿ, ಅಭ್ಯಾಗತ ಸಮಾಜದ ಸಂಘ ಸಂಸ್ಥೆಗಳಲ್ಲಿ ಅಲ್ಪಸಂಖ್ಯಾತರು ಹೆಚ್ಚಾಗಿ ಸೇರಿ ಪ್ರಾಥಮಿಕ ಸಂಬಂಧಗಳನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಮೂರನೆಯದಾಗಿ, ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ನಡುವೆ ಹೆಚ್ಚಾಗಿ ವಿವಾಹ ಸಂಬಂಧಗಳು ಬೆಳೆಯಬೇಕಾಗುತ್ತದೆ. ನಾಲ್ಕನೆಯದಾಗಿ ಅಲ್ಪಸಂಖ್ಯಾತರು ಬಹುಸಂಖ್ಯಾತ ಸಮುದಾಯದಲ್ಲಿ ಮಾನಸಿಕವಾಗಿ ಐಕ್ಯತೆ ಸಾಧಿಸಬೇಕಾಗುತ್ತದೆ.

ಅಂತರ್ ಸಮುದಾಯ ವಿವಾಹಗಳು ವಿಲೀನೀಕರಣದ ಅಳತೆ ಗೋಲು ಎನ್ನಬಹುದು. ಅಮೆರಿಕಕ್ಕೆ ಹೊಸದಾಗಿ ವಲಸೆ ಬಂದ ಜನರು ತಮ್ಮ ತಮ್ಮ ಗುಂಪುಗಳಿಗೆ ಅಂಟಿಕೊಂಡು ಜೀವಿಸುತ್ತಾರೆ. ಬೇರೆ ಬುಡಕಟ್ಟಿನವರೊಡನೆ ಮಿತಿಯಾದ ಸಂಪರ್ಕವಿಟ್ಟುಕೊಂಡಿರುತ್ತಾರೆ.

ಈ ಜನರು ಎರಡು ಅಥವಾ ಮೂರು ತಲೆಮಾರುಗಳು ಕಳೆಯುವವರೆಗೂ ಬೇರೆಯ ಬುಡಕಟ್ಟಿನವರೊಂಡನೆ ವಿವಾಹ ಸಂಬಂಧ ಬೆಳೆಸುವುದು ಅತಿ ವಿರಳ. ತಲೆತಲಾಂತರದಿಂದ ಇಲ್ಲಿ ನೆಲಸಿರುವ ಸಮುದಾಯಗಳು ಕೂಡ ಇದಕ್ಕೆ ಹೊರತಲ್ಲ. ಈ ದೃಷ್ಟಿಯಿಂದ ಅಮೆರಿಕ ಒಂದು "ಕರಗಿಸುವ ಕಡಾಯಿ" (Melting Pot) ಎನ್ನುವ ಜನಪ್ರಿಯ ಹೇಳಿಕೆಗೆ ಹುರುಳಿಲ್ಲ. ಉದಾಹರಣೆಗೆ ಯಹೂದ್ಯರು, ಕ್ಯಾಥೋಲಿಕರು ಮತ್ತು ಪ್ರಾಟಸ್‌ಟೆಂಟ್ ಮತದವರನ್ನು ತೆಗೆದುಕೊಳ್ಳಿ ಇವರ ನಡುವೆ ಕೂಡ ಅಂತರ್ಮತೀಯ ವಿವಾಹಗಳು ಕಡಿಮೆ. ಇದೇ ರೀತಿಯಲ್ಲಿ ಬುಡಕಟ್ಟುಗಳ ನಡುವೆ ಮತ ಮತ್ತು ಮೈಬಣ್ಣ ಇವು ವಿಲೀನೀಕರಣಕ್ಕೆ ತಡೆಯೊಡ್ಡುತ್ತವೆ. ಹವಾಯಿ ದ್ವೀಪಗಳನ್ನುಳಿದು ಅಮೆರಿಕದ ಇತರ ಪ್ರಾಂತ್ಯಗಳಲ್ಲಿ ಅಂತರ ಬುಡಕಟ್ಟಿನ ವಿವಾಹಗಳು ಅತಿ ವಿರಳ. ಇಂತಹ ವಿವಾಹಗಳು ಒಂದು ವರ್ಷದಲ್ಲಿ ನಡೆಯುವ ಎಲ್ಲಾ ವಿವಾಹಗಳ ಮೊತ್ತದಲ್ಲಿ ಸರಾಸರಿ ಎರಡು ಅಂಶದಷ್ಟು ಮಾತ್ರ ಎಂದು ಸಮಾಜಶಾಸ್ತ್ರ ಸಂಶೋಧೆಯಿಂದ ತಿಳಿದುಬಂದಿದೆ.

ಸಂಸ್ಕೃತಿ ಪರಂಪರೆಯ ಅಳಿವು ಉಳಿವು

ಎಲ್ಲಾ ಸಮುದಾಯದವರಂತೆ ಭಾರತೀಯ ವಲಸೆಗಾರರು ಕೂಡ ಬಹುಸಂಖ್ಯಾತರಾದ ಬಿಳಿಯರ (WASP) ಸಂಸ್ಕೃತಿ ಸಂಪ್ರದಾಯಗಳಿಗೆ ಶರಣಾಗಬೇಕೆ ಅಥವಾ ತಮ್ಮ ಭಾರತೀಯತೆಯನ್ನು ಉಳಿಸಿಕೊಳ್ಳಬೇಕೆ ಎಂಬ ಪ್ರಶ್ನೆಯನ್ನು ಎದುರಿಸಬೇಕಾಗುತ್ತದೆ. ಇಡೀ ಸಮುದಾಯದ ದೃಷ್ಟಿಯಿಂದ ಈ ಪ್ರಶ್ನೆಯನ್ನು ವಿಚಾರ ಮಾಡಬೇಕಾಗಿದೆ.

ವೈಯಕ್ತಿಕ ಅಭಿವೃದ್ಧಿಯ ದೃಷ್ಟಿಯಲ್ಲಿ ಬಿಳಿಯರಂತಾಗುವುದರಲ್ಲಿ ಲಾಭವಿದೆ ಎಂದು ಕೆಲವರು ವಾದಿಸಬಹುದು. ಇಂತವರಿಗೆ ತಮ್ಮ ಭಾರತೀಯತೆಯನ್ನು ಬಿಟ್ಟುಕೊಡುವುದು ನಷ್ಟವೆನಿಸಲಾರದು. ಇಂತಹ "ಬಿಳಿಯ ಭಾರತೀಯರು" ಅಮೆರಿಕ ಸಮಾಜದ ಆರ್ಥಿಕ ಶ್ರೇಣಿಯಲ್ಲಿ ಮೇಲೇರಿಹೋಗಿ ತಮ್ಮ ಪರಂಪರೆಯೊಂದಿಗೆ ಸಂಪರ್ಕ ಕಡಿದುಕೊಳ್ಳಬಹುದು. ಬಿಳಿಯ ಸಂಸ್ಕೃತಿಯಲ್ಲಿ ಬೆರೆತು ಒಂದಾಗಿದ್ದೇವೆ ಎಂಬ ಭಾವನೆಯನ್ನು ಬೆಳೆಸಿಕೊಳ್ಳಬಹುದು. ಇಂತಹ ಭಾರತೀಯರನ್ನು ಬಿಳಿಯರು ತಮ್ಮ ಕ್ಲಬ್ಬುಗಳಲ್ಲಿ, ಸಂಘ ಸಂಸ್ಥೆಗಳಲ್ಲಿ ನೆಪ ಮಾತ್ರಕ್ಕೆ ಸೇರಿಸಿಕೊಂಡು ಅವರಲ್ಲಿ ವಿಲೀನೀಕರಣದ ಭ್ರಮೆ ಹುಟ್ಟಿಸಬಹುದು.

ಸಂಪೂರ್ಣವಾಗಿ ವಿಲೀನಗೊಳ್ಳಬೇಕೆ ಅಥವಾ ಪರಂಪರೆಯನ್ನು ಉಳಿಸಿಕೊಳ್ಳಬೇಕೆ ಎನ್ನುವುದರ ಬಗ್ಗೆ ಅಲ್ಪಸಂಖ್ಯಾತರಲ್ಲಿಯೆ ಒಮ್ಮತವಿಲ್ಲ. "ಕರಗಿಸುವ ಕಡಾಯಿ" (Melting Pot) ಉಪಮೆಯಲ್ಲಿ ನಂಬುಗೆಯುಳ್ಳವರು "ನಮ್ಮ ವೈಶಿಷ್ಟ್ಯವನ್ನು ಕಾಪಾಡಿಕೊಳ್ಳಬೇಕು" ಎನ್ನುವವರನ್ನು ಅನುಮಾನಾಸ್ಪದವಾಗಿ ಕಂಡು ಸೋಗಲಾಡಿಗಳೆಂದು ಹೀಯಾಳಿಸಬಹುದು. ಅಂತವರು ತಾವು ಅಮೆರಿಕನ್ನರಾಗಬೇಕು ಎನ್ನುವ ಹುರುಪಿನಲ್ಲಿ ಮಕ್ಕಳಿಗೆ ತಮ್ಮ ತಾಯ್ನುಡಿಯನ್ನಾಗಿಲೀ, ಕುಟುಂಬ ಹಾಗೂ ಮತ ಸಂಪ್ರದಾಯ

ಗಳನ್ನಾಗಲೀ ಕಲಿಸುವ ಪ್ರಯತ್ನ ಮಾಡುವುದಿಲ್ಲ. ತಮ್ಮ ಪರಂಪರೆಯ ಬಗ್ಗೆ ಮಕ್ಕಳಲ್ಲಿ ಹೆಮ್ಮೆ ಮೂಡಿಸುವುದಿಲ್ಲ. ಇದರಿಂದಾಗಿ ತಂದೆ, ತಾಯಿ ಮತ್ತು ಮಕ್ಕಳಲ್ಲಿ ಪರಸ್ಪರ ಅರಿಯುವಿಕೆ ಕಡಿಮೆಯಾಗಿ ಅವರ ನಡುವಿನ ಕಂದರ ಹಿರಿದಾಗಬಹುದು.

ಹೆಚ್ಚಿನ ಆದಾಯ ತರುವ ಒಂದು ಕೆಲಸ, ಪಟ್ಟಣದ ಹೊರವಲಯದಲ್ಲಿ ಒಂದು ಸೊಗಸಾದ ಮನೆ, ಎರಡು ಮಕ್ಕಳು, ಎರಡು ಕಾರು ಇವು ಭಾರತೀಯರು ಬಿಳಿಯರ ಸಮಾಜದಲ್ಲಿ ಹೊಂದಾಣಿಕೆಯಾಗಿರುವ ಸಂಕೇತಗಳಾಗಿ ತೋರಬಹುದು. ಆದರೆ ಬಿಳಿಯರ ಮತ್ತು ನಮ್ಮ ನಡುವೆ ಪ್ರಾಥಮಿಕ ಸಂಬಂಧಗಳನ್ನು ಇರಿಸಿಕೊಳ್ಳಲು ನಾವು ಪ್ರಯತ್ನಪಟ್ಟಾಗ ಆ ಹಾದಿಯಲ್ಲಿ ಅಗೋಚರವಾದ ಗೋಡೆಗಳಿಗೆ ಡಿಕ್ಕಿ ಹೊಡೆಯುವ ಅನುಭವ ನಮಗಾಗುವುದು. ನಮ್ಮೊಂದಿಗೆ ನೆಂಟಸ್ತಿಕೆ, ಗಳಸ್ಯ ಕಂಠಸ್ಯ, ಸ್ನೇಹ, ನೋವು-ನಲಿವುಗಳಲ್ಲಿ ಒಂದಾಗಿ ಪಾಲ್ಗೊಳ್ಳುವುದು ಮುಂತಾದ ಆತ್ಮೀಯ ಸಂಬಂಧಗಳನ್ನು ಬೆಸೆಯುವ ಮಟ್ಟಕ್ಕೆ ಹೋಗಲು ಬಿಳಿಯರು ಹಿಂದೇಟು ಹೊಡೆಯುತ್ತಾರೆ. ನಾವು ಕೂಡ. ಮೇಲಾಗಿ ಸಾವು ಮುಂತಾದ ಸಂಕಷ್ಟಗಳು ಬಂದೊದಗಿದಾಗ ಎಲ್ಲರಂತೆಯೆ ನಾವು ಕೂಡ ನಮ್ಮ ಸಮುದಾಯದಿಂದಲೆ ಸಹಾಯ ನಿರೀಕ್ಷಿಸಬೇಕಾಗುತ್ತದೆ. ಸಮುದಾಯದ ಸಹಾನುಭೂತಿ, ಕರುಣೆ ಮತ್ತು ನೈತಿಕ ಪ್ರೋತ್ಸಾಹದಿಂದ ವ್ಯಕ್ತಿಗಳ ಬದುಕು ಸಹನೀಯವಾಗುತ್ತದೆ. ಅರ್ಥಪೂರ್ಣವಾಗುತ್ತದೆ. ಹಾಗಿಲ್ಲದೆ ಹೋದಲ್ಲಿ ವ್ಯಕ್ತಿಗಳು ಮಾನಸಿಕವಾಗಿ ಪರಕೀಯತೆಗೆ ಗುರಿಯಾಗಿ ಆತ್ಮಹತ್ಯೆ ಮುಂತಾದ ಹಾನಿಕಾರಕ ಪರಿಣಾಮಗಳು ಉಂಟಾಗಬಹುದು.

ಅಮೆರಿಕದಂತಹ ಆಧುನಿಕ ಸಮಾಜದಲ್ಲಿ ಕೂಡ ಸಂಪ್ರದಾಯ, ಸಂಸ್ಕೃತಿ ಆಧಾರದ ಮೇಲೆ ನಿಂತಿರುವ ಸಮುದಾಯಗಳ ಅವಶ್ಯಕತೆ ಕಡಿಮೆಯಾಗಿಲ್ಲ. ಆದ್ದರಿಂದ ಅವು ಇನ್ನೂ ಉಳಿದುಕೊಂಡು ಕಾಲಕ್ರಮದಲ್ಲಿ ಪ್ರಬಲವಾಗುತ್ತಾ ಬಂದಿವೆ. ಅಮೆರಿಕದಲ್ಲಿ ನೆಲಸಿರುವ ಚೀನೀಯರಲ್ಲಿ, ಜಪಾನಿಯರಲ್ಲಿ, ಮೆಕ್ಸಿಕನರಲ್ಲಿ ಯುವ ಜನಾಂಗ ತಮ್ಮ ನೈಜ ಅಸ್ತಿತ್ವ, ಸಂಸ್ಕೃತಿ ಮತ್ತು ಪರಂಪರೆಯನ್ನು ಪುನಃ ಕಂಡುಕೊಂಡು ಅವನ್ನು ಮೈಗೂಡಿಸಿಕೊಳ್ಳಲು ಉತ್ಸುಕರಾಗಿದ್ದಾರೆ.

ಹೀಗೆ ತಮ್ಮ ಪರಂಪರೆಯನ್ನು ಗುರುತಿಸಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ ಜನರು ಇತರ ಬುಡಕಟ್ಟಿನವರ ಪರಂಪರೆಗಳನ್ನು ಸಹಾನುಭೂತಿಯಿಂದ ನೋಡಲು ಕಲಿಯುತ್ತಾರೆ. ಸಮಾಜ ಶಾಸ್ತ್ರಜ್ಞ ಮೈಕೆಲ್‌ನೋವಕ್ ತನ್ನ "The Rise of the Unmeltable Ethnics" ಎಂಬ ಜನಪ್ರಿಯ ಕೃತಿಯಲ್ಲಿ ಹೇಳಿರುವಂತೆ ತಮ್ಮ ಪರಂಪರೆಯ ಬಗ್ಗೆ ಸ್ಪಷ್ಟವಾಗಿ ಅರಿತಿರುವವರು ತಮ್ಮ ಬೆಲೆಯನ್ನು ತಿಳಿದುಕೊಂಡು ತಮ್ಮ ಬಗ್ಗೆ ಭರವಸೆ ಬೆಳಸಿಕೊಳ್ಳುತ್ತಾರೆ. ಹಾಗೆ ಮಾಡುವುದರಿಂದ ಅವರು ಅಮೆರಿಕ ಸಂಕೀರ್ಣ ಸಮಾಜದಲ್ಲಿ ಇತರರ ವೈಶಿಷ್ಟ್ಯವನ್ನು ಗುರುತಿಸಿ ಅವರೊಂದಿಗೆ ಸಹನೆಯಿಂದ ವರ್ತಿಸಿ ಸಾಮರಸ್ಯ ಬೆಳೆಸುವುದು ಸಾಧ್ಯವಾಗುತ್ತದೆ.

KA-SKMND-470-2000.
Regd. No. KAR/KAN/200/3820
Val 3 Leaue : 9 - 12

ತೆರೆದ-ಅಂಚೆ

To,

MELKOTE
8 03
DELY
MANDYA

JANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, (Regd.) Melkote. Dist- Mandya - 571 431
Phone : 08236-298754

COM Prints, Mysore ☎ 2460936 Cell : 9448055560